# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:321 • ನೋಂದಣಿ ನಂ.:KARKAN27911 • ವಿಜಯನಗರ • 23.05.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:321 • Reg.No:KARKAN27911 • VIJAYANAGARA • 23.05.2024 • Thursday • Page:04 • Rs:2







ಮೈಕ್ರೋ ನ್ಯೂಸ್

## ವಸ್ತು ಸಂಗ್ರಹಾಲಯದಲ್ಲಿ ಆಫ್ರಿಕಾದ ಹಳೆ ಶಿಲಾಯುಗದ ಆಕರಗಳು ಪ್ರದರ್ಶನ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ರಾಬರ್ಟ್ ಬ್ರೂಸ್‌ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದಲ್ಲಿ ಆಫ್ರಿಕಾದಲ್ಲಿ ಸಿಕ್ಕ ಹಳೆ ಶಿಲಾಯುಗದ ಕಲ್ಲಿನ ಆಕರಗಳನ್ನು (toql) 3ಡಿ ಮಾದರಿಯಲ್ಲಿ ತಯಾರಿಸಿದ ತದ್ರೂಪ ಆಕರಗಳಾಗಿ ಸಾರ್ವಜನಿಕರ ವೀಕ್ಷಣೆಗಾಗಿ ಪ್ರದರ್ಶನಕ್ಕೆ ಇರಿಸಲಾಗಿದೆ.

ಈ 3ಡಿ ಮಾದರಿ ಆಕರಗಳು ಬೋನಕ್ಲೋನ್ಸ್ ಎಂಬ ಅಮೆರಿಕನ್ ಕಂಪನಿಯಿಂದ ಖ್ಯಾತ ಪ್ರಾಗೈತಿಹಾಸ ತಜ್ಞ ಪ್ರೊ.ರವಿ ಕೊರಿಶೆಟ್ಟರ್ ಅವರು ಖರೀದಿಸಿ ವಸ್ತು ಸಂಗ್ರಹಾಲಯಕ್ಕೆ ನೀಡಿದ್ದಾರೆ.

ವಸ್ತು ಸಂಗ್ರಹಾಲಯದ ನಿರ್ವಹಣಾ ಸಮಿತಿಯ ಸದಸ್ಯರುಗಳಾದ ಸಂತೋಷ್ ಮಾರ್ಟಿನ್ ಹಾಗೂ ಎಂ.ಅಹಿರಾಜ ಅವರು ಈ 3ಡಿ ಮಾದರಿಯ ಆಕರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಗರಾಜ ಅವರಿಗೆ ನೀಡಿ ಪ್ರದರ್ಶನಕ್ಕೆ ಇರಿಸಲಾಯಿತು.

'ಈ ವಸ್ತು ಸಂಗ್ರಹಾಲಯದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ಸಿಕ್ಕ 15 ತಲೆಬುರುಡೆಗಳ ತದ್ರೂಪ ತಲೆಬುರುಡೆಗಳನ್ನು ಪ್ರದರ್ಶನಕ್ಕಿರಿಸಿರುವುದು ಒಂದು ವಿಶೇಷ. ಜನರು, ಪ್ರಮುಖವಾಗಿ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ವಸ್ತು ಸಂಗ್ರಹಾಲಯದಲ್ಲಿ ಪ್ರದಶನಕ್ಕಿರಿಸಿದ ವಿಶೇಷ ವಸ್ತುಗಳನ್ನು ವೀಕ್ಷಿಸಬೇಕು ಮತ್ತು ಸಾರ್ವಜನಿಕರೂ ವೀಕ್ಷಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಅವರು ಅಭಿಪ್ರಾಯ ಪಟ್ಟರು.



# ಸ್ಮಾರಕಗಳು ನೆಲಕ್ಕುರುಳುವ ಮುನ್ನ ಸಂರಕ್ಷಿಸಿ

## ಹಂಪಿಯಲ್ಲಿ ಮಳೆಗೆ ನೆಲಕ್ಕುರುಳಿದ ಸಾಲುಮಂಟಪ ಸ್ಥಳ ವೀಕ್ಷಣೆ | ಎಎಸ್‌ಐ ಅಧಿಕಾರಿಗಳಿಗೆ ಡಿಸಿ ದಿವಾಕರ ಖಡಕ್ ಸೂಚನೆ





**ಹಂಪಿ ಟೈಮ್ಸ್ ಹೊಸಪೇಟೆ**

ಹವಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದ್ದರೂ, ಭಾರತೀಯ ಪುರಾತತ್ವ ಸಮೀಕ್ಷೆ ಇಲಾಖೆಯ ಅಧಿಕಾರಿಗಳ ತಾತ್ಸಾರದಿಂದಾಗಿ ಹಂಪಿ ಶ್ರೀವಿರೂಪಾಕ್ಷೇಶ್ವರ ಸ್ವಾಮಿಯ ರಥಬೀದಿಯ ಪಕ್ಕದ ಕಲ್ಲಿನ ಕಂಬಗಳಿಂದ ನಿರ್ಮಿಸಲ್ಪಟ್ಟಿದ್ದ ಸಾಲುಮಂಟಪಗಳು ಮಳೆಗೆ ನೆನೆದು ನೆಲಕ್ಕುರುಳಿವೆ. ಮಂಟಪದ ಬೃಹತ್ ಕಲ್ಲುಬಂಡೆಗಳು ತುಂಡಾಗಿರುವುದು ಕಂಡ ಸ್ಮಾರಕ ಪ್ರಿಯರು ಇಲಾಖೆಯ ಕಾರ್ಯವೈಖರಿ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಸೋಮವಾರ ತಡರಾತ್ರಿ ಬಾನಗಲ ಗುಡಿಗಿದ ಗುಡುಗು ಸಿಡಿಲಿನ ಆರ್ಭಟದೊಂದಿಗೆ ಸುರಿದ ಮಳೆಗೆ ಹಂಪಿಯ ಅನೇಕ ಸ್ಮಾರಕಗಳ ಮೇಲ್ಛಾವಣಿಗಳು ನಿರ್ವಹಣೆ ಕೊರತೆಯಿಂದ ಮಣ್ಣು ಹೊದ್ದುಕೊಂಡು, ಹುಲ್ಲುಗಾವಲು ಪ್ರದೇಶದಂತೆ ರಾರಾಜಿಸುತ್ತಿದ್ದರೂ, ನಿರ್ವಹಣೆ ಹೊಣೆ ಹೊತ್ತ ಇಲಾಖೆಯ ಅಧಿಕಾರಿಗಳು ಕಣ್ತೆರೆದು ನೋಡಿ ನೋಡದಂತೆ ಇರುವುದೇ ಸ್ಮಾರಕಗಳು ನಾಶಕ್ಕೆ ಕಾರಣ ಎನ್ನಲಾಗುತ್ತಿದೆ.

ಹಂಪಿಯ ಅಭಿವೃದ್ಧಿಗೆ ದಶಕಗಳಿಂದಲೂ ಅನುದಾನ ಹರಿದು ಬರುತ್ತಿದ್ದರೂ, ಹಂಪಿಯ ಕೇಂದ್ರಬಿಂದು ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಮುಂಭಾಗದ ರಥಬೀದಿಯ ಎರಡು ಬದಿಯ ಸಾಲುಮಂಟಪಗಳ ಕಾರ್ಯ ಇಂದಿಗೂ ಪೂರ್ಣಗೊಳ್ಳುತ್ತಿಲ್ಲ. ನಿರ್ವಹಣೆ ಕೊರತೆಯಿಂದ ಶಿಥಿಲಗೊಂಡ ಮಂಟಪಗಳು, ಸ್ಮಾರಕಗಳು ಮಳೆಗೆ ಈ ಹಿಂದಿನಿಂದಲೂ ಬಾಗಿ ಬೀಳುತ್ತಲಿವೆ. ಸ್ಮಾರಕಗಳು ಬಿದ್ದಾಗ ಮಾತ್ರ ಅಧಿಕಾರಿಗಳು ಅದರ ನಿರ್ವಹಣೆಗಾಗಿ ಮೇಲಾಧಿಕಾರಿಗಳಿಗೆ, ಸರ್ಕಾರಕ್ಕೆ ಅನುದಾನದ ಪ್ರಸ್ತಾವನೆ ಸಲ್ಲಿಸಬೇಕಿದೆ ಎಂದೇಳಿ ಜಾರಿಕೊಳ್ಳುತ್ತಾ ಬರುತ್ತಿದ್ದಾರೆ. ಆದರೆ ಈ ಕೆಲಸವನ್ನು ಸ್ಮಾರಕಗಳು ಉರುಳಿ ಬೀಳುವ ಮುನ್ನವೆ ಮಾಡಿದ್ದರೆ, ಅದೆಷ್ಟು ಸ್ಮಾರಗಳು ಭಗ್ನವಾಗದೆ ತಮ್ಮ ನಿಜ ಸ್ವರೂಪವನ್ನು ಪ್ರವಾಸಿಗರಿಗೆ ಪ್ರದರ್ಶಿಸುತ್ತಿದ್ದವು. ಇನ್ನಾದರೂ ಹಂಪಿ ಕೇವಲ ಸ್ಮಾಕರಗಳ ಗುಚ್ಚವಷ್ಟೇ ಅಲ್ಲ. ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ನಾಂದಿಯಾದ ದೈವಶಕ್ತಿಯ ನೆಲೆ ಎಂಬುದನ್ನು ಅರಿತು, ಹಂಪಿಯ ಅಭಿವೃದ್ಧಿಗೆ ಅಧಿಕಾರಿಗಳು ಕಂಕಣಬದ್ಧರಾಗಿ ಪಣತೊಡಬೇಕಿದೆ.

### ಜಿಲ್ಲಾಧಿಕಾರಿ ಭೇಟಿ ಪರಿಶೀಲನೆ

ಮಳೆಗೆ ನೆನೆದು ತೇವಗೊಂಡಿದ್ದ ಹಂಪಿ ಸಾಲುಮಂಟಪಗಳು ಮಂಗಳವಾರ ರಾತ್ರಿ ನೆಲಕ್ಕುರುಳಿದ್ದು, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸ್ಮಾರಕಗಳ ಸಂರಕ್ಷಣೆಯಿಂದ ಜನರಿಗೆ ಇತಿಹಾಸವನ್ನು ಉಣಬಡಿಸಬಹುದು. ಭಾರತೀಯ ಪುರಾತತ್ವ ಇಲಾಖೆ ಅಧಿಕಾರಿಗಳು ಸ್ಮಾರಕಗಳ ಸಂರಕ್ಷಣೆಯಲ್ಲಿ ನಿರ್ಲಕ್ಷ್ಯತೋರದೆ, ಕಾರ್ಯನಿರ್ವಹಿಸಬೇಕು. ಈಗಾಗಲೆ ಬಿಡುಗಡೆಯಾಗಿರುವ ಅನುದಾನದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ವೇಗ ಪಡೆದುಕೊಳ್ಳಬೇಕು. ಮತ್ತುಷ್ಟು ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಿರುವ ಅನುದಾನಕ್ಕೆ ಕೇಂದ್ರಕ್ಕೆ ಪತ್ರ ಬರೆಯಲಾಗುವುದು. ಬೀಳುವ ಹಂತದಲ್ಲಿರುವ ಮಂಟಪಗಳ ಬಳಿ ಪ್ರವಾಸಿಗರು ತೆರಳದಂತೆ ಸೂಕ್ತ ಭದ್ರತೆ ಒದಗಿಸಬೇಕು. ಸ್ಮಾರಕಗಳ ಸಂರಕ್ಷಣೆಗೂ ಅಗತ್ಯ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ತಹಶೀಲ್ದಾರ ಎಂ.ಎಂ.ಶ್ರುತಿ, ಎಎಸ್‌ಐ ಅಧಿಕಾರಿಗಳು ಇತರರು ಇದ್ದರು.

### ಸಂಚಾರ ಸುಗಮಗೊಳಿಸಿದ ಡಿಸಿ



ಹಂಪಿಯ ಜನತಾ ಪ್ಲಾಟ್‌ನಲ್ಲಿ ವಾಸಿಸುತ್ತಿರುವ ನಿವಾಸಿಗಳು ನಿತ್ಯ ತಮ್ಮ ಪ್ರದೇಶದಿಂದ ಹೊರಬರಲು ಕಳೆದು ಎಂಟು ತಿಂಗಳಿಂದ ಹರಸಾಹಸ ಪಡುತ್ತಿದ್ದರು. ಭಾರತೀಯ ಪುರಾತತ್ವ ಸಮೀಕ್ಷೆ ಇಲಾಖೆಯ ಅಧಿಕಾರಿಗಳ ನಿರ್ದೇಶನದ ಮೇರೆಗೆ ಕಾರ್ಮಿಕರು ನಿವಾಸಿಗಳ ಸಂಚಾರಕ್ಕೆ ಅಡ್ಡವಾಗಿ ಪೈಪ್‌ಗಳನ್ನು ಅಳವಡಿಸಿದ್ದರು. ಇದರಿಂದ ವಿಕಲಚೇತನರು ಸೇರಿದಂತೆ ಮಹಿಳೆಯರು, ಮಕ್ಕಳು, ವಯೋವೃದ್ಧರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ಹವಾಮಾ ವ್ಯಾಪ್ತಿಯ ಹಳ್ಳಿಗಳ ಕ್ಷೇಮಾಭಿವೃದ್ಧಿ ಸಂಘದವರು ಸ್ಮಾರಕಗಳ ಪರಿಶೀಲನೆಗೆ ಭೇಟಿನೀಡಿದ್ದ ಜಿಲ್ಲಾಧಿಕಾರಿಗಳ ಗಮನಕ್ಕೆ ಜನರು ಅನುಭವಿಸುತ್ತಿರುವ ಸಮಸ್ಯೆಯನ್ನು ಬಿಚ್ಚಿಟ್ಟರು. ಜನಸಾಮಾನ್ಯರ ನೋವಿಗೆ ಸ್ಥಳದಲ್ಲೇ ಸ್ಪಂದಿಸಿದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದ ಕಬ್ಬಿಣದ ಪೈಪುಗಳನ್ನು ತೆರವು ಗೊಳಿಸಲು ಸೂಚಿಸಿದ್ದರಿಂದ ಕೂಡಲೇ ಸಿಬ್ಬಂದಿ ತೆರವುಗೊಳಿಸಿದರು. ಈ ಸಂದರ್ಭದಲ್ಲಿ ವಿರೂಪಾಕ್ಷಿ ವಿ ಹಂಪಿ, ಎಚ್.ಹುಲುಗಪ್ಪ, ಮಲ್ಲಿಕಾರ್ಜುನ, ರಾಜಕುಮಾರಸಿಂಗ್ ಇತರರು ಇದ್ದರು.



# ಕೆ.ಪಿ.ಎಂ.ಇ ಕಾಯ್ದೆ ಉಲ್ಲಂಘನೆ ಶರಣಂ ಆಸ್ಪತ್ರೆಗೆ ಬೀಗ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಮರಾವತಿಯಲ್ಲಿರುವ ಶರಣಂ ಆಸ್ಪತ್ರೆಯು ಕೆ.ಪಿ.ಎಂ.ಇ. ಕಾಯ್ದೆಯ ನಿಮಯ ಗಳನ್ನು ಪಾಲಿಸದಿರುವುದು ಮತ್ತು ಇತ್ತೀಚೆಗೆ ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಾಗಿದ್ದ 9 ವರ್ಷದ ಬಾಲಕ ಗೌತಮ ಅನುಮಾನಾಸ್ಪದ ಸಾವಿಗೆ ಕಾರಣವಾಗಿರುವುದರಿಂದ ಕೆಪಿಎಂಇ ಕಾಯ್ದೆಯನ್ವಯ ಆಸ್ಪತ್ರೆಯನ್ನು ತಾತ್ಕಾಲಿಕವಾಗಿ ಮುಚ್ಚಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನಿರ್ದೇಶನದ ಮೇರೆಗೆ ತಾಲೂಕು ಆರೋಗ್ಯ ಅಧಿಕಾರಿ ಶರಣಂ ಆಸ್ಪತ್ರೆಯ ವೈದ್ಯ ಡಾ.ವಿನಯ ರಾಘವೇಂದ್ರ ಎಚ್. ಅವರಿಗೆ ಬುಧವಾರ ನೋಟೀಸ್ ಜಾರಿ ಮಾಡಿದ್ದಾರೆ.

ಈಗಾಗಲೇ ಅಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳರೋಗಿಗಳನ್ನು ದಾಖಲಿಸಿಕೊಂಡಿದ್ದಲ್ಲಿ ಕೂಡಲೇ ಅವರನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಬೇಕೆಂದು ನೋಟೀಸ್‌ನಲ್ಲಿ ಸೂಚಿಸಿದ್ದಾರೆ. ಕೆಪಿಎಂಇ ಕಾಯ್ದೆ ಪಾಲಿಸದೆ ಕಾರ್ಯನಿರ್ವಹಿ ಸುತ್ತಿರುವ ಕೆಲ ಖಾಸಗಿ ಆಸ್ಪತ್ರೆಗಳ ಪೈಕಿ ಶರಣಂ ಆಸ್ಪತ್ರೆ ಮೇಲೆ ಕ್ರಮಜರುಗಿಸಿರುವುದು ಜಿಲ್ಲೆಯಲ್ಲಿ ಇದೇ ಮೊದಲಾಗಿದೆ.

> ಆಸ್ಪತ್ರೆಯ ಒಳರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಗೊಳಿಸಲು 24 ಗಂಟೆ ಅವಕಾಶ ನೀಡಲಾಗಿದೆ. ಅವಧಿ ನಂತರ ಆಸ್ಪತ್ರೆಯನ್ನು ಸೀಜ್ ಮಾಡಲಾಗುವುದು. ಖಾಸಗಿ ವೈದ್ಯರು ಕೆಪಿಎಂಇ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ರೋಗಿಗಳ ಜೊತೆ ಸೌಹಾರ್ಧಯುತವಾಗಿ ನಡೆದುಕೊಳ್ಳಬೇಕು.
> – **ಡಾ.ಶಂಕರನಾಯ್ಕ** ಜಿಲ್ಲಾ ಆರೋಗ್ಯಾಧಿಕಾರಿ

# ಇಂದು ಶ್ರೀ ವಡಕರಾಯಸ್ವಾಮಿ ಶ್ರೀ ರಂಗನಾಥಸ್ವಾಮಿ ರಥೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಮೇನ್ ಬಜಾರನಲ್ಲಿರುವ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಟ್ಟಿರುವ ಶ್ರೀ ವಡಕರಾಯಸ್ವಾಮಿ ಮತ್ತು ಶ್ರೀ ರಂಗನಾಥಸ್ವಾಮಿಯ ರಥೋತ್ಸವ ಮೇ 23 ರಂದು ಸಂಜೆ 4ಕ್ಕೆ ಜರುಗಲಿದೆ. ಬೆಳಿಗ್ಗೆ ಶ್ರೀಸ್ವಾಮಿಗೆ ವಿಶೇಷ ಪೂಜೆ ನೆರವೇರಲಿವೆ. ಭಕ್ತರು ದೇವರ ದರ್ಶನ ಪಡೆದು ರಥೋತ್ಸವದಲ್ಲಿ ಭಾಗವಹಿಸಿ ಶ್ರೀಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನದ ಇಒ ಹನುಮಂತಪ್ಪ ತಿಳಿಸಿದ್ದಾರೆ.

# ವೃತ್ತಿನಿರತ ಛಾಯಾಗ್ರಾಹಕರಿಗೆ ರಕ್ಷಣೆ ಕೊಡಿ

## ಹಲ್ಲೆಕೋರನ ಬಂಧನಕ್ಕೆ ತುಂಗಭದ್ರಾ ಫೋಟೊ ಮತ್ತು ವೀಡಿಯೋಗ್ರಾಫರ್ಸ್ ಅಸೋಷಿಯೇಷನ್ ಆಗ್ರಹ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜಧಾನಿ ಬೆಂಗಳೂರಿನಲ್ಲಿ ವೃತ್ತಿನಿರತ ಛಾಯಾಗ್ರಾಹಕನ ಮೇಲೆ ಹಲ್ಲೆ ನಡೆಸಿದ ಪುಂಡರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಹೊಸಪೇಟೆ ತುಂಗಭದ್ರಾ ಫೋಟೊ ಮತ್ತು ವೀಡಿಯೋಗ್ರಾಫರ್ಸ್ ಅಸೋಷಿಯೇಷನ್‌ವತಿಯಿಂದ ತಹಶೀಲ್ದಾರ್ ಎಂ.ಎಂ.ಶ್ರುತಿ ಮೂಲಕ ಸಿಎಂಗೆ ಬುಧವಾರ ಮನವಿ ಸಲ್ಲಿಸಿದರು.

ಅಸೋಷಿಯೇಷನ್ ಅಧ್ಯಕ್ಷ ಜಿ.ಸುರೇಶ ಮಾತನಾಡಿ, ಬೆಂಗಳೂರಿನ ಶಿವಾಜಿನಗರದ ಶಮ್ಸ್ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದ್ದ ಮದುವೆ ಸಮಾರಂಭವೊಂದರ ವೀಡಿಯೋ ಶೂಟಿಂಗ್ ಮಾಡುತ್ತಿದ್ದ ಛಾಯಗ್ರಾಹಕನ ಮೇಲೆ ಕ್ಷುಲ್ಲಕ ಕಾರಣಕ್ಕೆ ಅಲ್ಲಿದ್ದ ಕೆಲ ಪುಂಡರು ಹಲ್ಲೆ ನಡೆಸಿ ಗಾಯಗೊಳಿಸಿರುವುದು ಖಂಡನೀಯ.



ಸ್ವಾಭಿಮಾನಿಗಳಾಗಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತಿರುವ ಛಾಯಗ್ರಾಹಕರಿಗೂ ರಾಜ್ಯದಲ್ಲಿ ರಕ್ಷಣೆ ಇಲ್ಲದಂತಾಗಿದೆ. ಸರ್ಕಾರದ ಸೌಲಭ್ಯಗಳಿಂದ ವಂಚಿತ ಛಾಯಗ್ರಾಹಕರಿಗೆ ಕನಿಷ್ಠ ರಕ್ಷಣೆಯನ್ನಾದರೂ ಸರ್ಕಾರ ನೀಡಬೇಕು. ಈಗಾಗಲೇ ರಾಜ್ಯಸಂಘ ದೂರು ದಾಖಲಿಸಿದ್ದು, ಕೂಡಲೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಹಲ್ಲೆ ಮಾಡಿದವರನ್ನು ಬಂಧಿಸಬೇಕು. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಿದಾಗ ಮಾತ್ರ ಹಲ್ಲೆಗಳು ಹತೋಟಿಗೆ ಬರಲು ಸಾಧ್ಯ. ಸರ್ಕಾರ ನಿರ್ಲಕ್ಷ್ಯವಹಿಸಿದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಅಸೋಷಿಯೇಷನ್ ಪ್ರಧಾನ ಕಾರ್ಯದರ್ಶಿ ಎಂ.ಸಂಜಯ್ ಕುಮಾರ್ ಮಾತನಾಡಿ, ವೃತ್ತಿನಿರತ ಛಾಯಗ್ರಾಹಕರಿಗೆ ಸೂಕ್ತ ರಕ್ಷಣೆ ನೀಡಬೇಕು. ಹಲ್ಲೆಗೊಳಗಾಗಿರುವ ಛಾಯಾಗ್ರಾಹಕನಿಗೆ ಸರ್ಕಾರ ಪರಿಹಾರ ನೀಡಿ, ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ಗೌರವಾಧ್ಯಕ್ಷ ತಾಯಬ್ ಹುಸೇನ್, ಉಪಾಧ್ಯಕ್ಷ ಎ.ಎಂ.ಮಲ್ಲಿಕಾರ್ಜುನಗೌಡ, ಪದಾಧಿಕಾರಿಗಳಾದ ವಿ.ಸಂಜಯ್ ಛಲವಾದಿ, ಪಿ.ಮಾರುತಿ, ಚಂದ್ರಶೇಖರ್, ಗಣೇಶ ಸೇರಿದಂತೆ ಸದಸ್ಯರು ಇದ್ದರು.




# ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ: ಮೈಕ್ರೋ ಅಬ್ಸರ್ವರ್ ತರಬೇತಿ ಕಾರ್ಯಗಾರ



**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ–2024ರ ನಿಮಿತ್ತ ಬುಧವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೈಕ್ರೋ ಅಬ್ಸರ್ವರ್ ಗಳಿಗೆ ತರಬೇತಿ ಕಾರ್ಯಗಾರ ನಡೆಯಿತು.

ಜಿಲ್ಲಾ ತರಬೇತಿ ಸಂಸ್ಥೆ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿ ಅವರು ಜಿಲ್ಲೆಯ ಎಲ್ಲಾ ಮೈಕ್ರೋ ಅಬ್ಸರ್ವರ್ ಗಳಿಗೆ ತರಬೇತಿಯನ್ನು ನೀಡಿದರು.

ಮೈಕ್ರೋ ಅಬ್ಸರ್ವರ್ ಗಳಿಗೆ ಟೆಂಡರ್ ಮತಗಳ ಬಗ್ಗೆ ಮಾಹಿತಿ ನೀಡಿದರು. ಮೈಕ್ರೋ ಅಬ್ಸರ್ವರ್ ಅವರ ಕೆಲಸ ಚುನಾವಣೆ ಸರಿಯಾದ ಸಮಯಕ್ಕೆ ನಡೆಯುವಂತೆ ಗಮನಹರಿಸುವದರ ಜೊತೆಗೆ ಪ್ರತಿಯೊಂದು ಚುನಾವಣಾ ಮತಗಟ್ಟೆಯಲ್ಲಿ ವಿಡಿಯೋಗ್ರಫಿ ಮತ್ತು ಮತಗಟ್ಟೆ ಅಧಿಕಾರಿಗಳ ಕರ್ತವ್ಯದ ಮೇಲೆ ತಮ್ಮ ಗಮನವಿರಬೇಕು. ಸರಿಯಾದ ಸಮಯಕ್ಕೆ ಅಧಿಕಾರಿಗಳ ಹಾಜರಾಗಬೇಕು ಎಂದು ಹೇಳಿದರು.

ಮತಗಟ್ಟೆಗಳಲ್ಲಿ ಅಧಿಕಾರಿಗಳು ಯಾವುದೇ ರಾಜಕೀಯ ವ್ಯಕ್ತಿಗಳ ಬಗ್ಗೆ ಚರ್ಚೆ ಮಾಡುವಂತಿಲ್ಲ. ಮೈಕ್ರೋ ಅಬ್ಸರ್ವರ್ ತಮಗೆ ನಿಗದಿಪಡಿಸಿದ ಆಯಾ ತಾಲ್ಲೂಕಿನ ಮತಗಟ್ಟೆ ವ್ಯಾಪ್ತಿಯಲ್ಲಿ ಕರ್ತವ್ಯವನ್ನು ನಿರ್ವಹಿಸುವುದರ ಜೊತೆಗೆ ಮತದಾನ ಕೇಂದ್ರದ ಒಳಗಡೆ ಯಾವುದೇ ಅನವಶ್ಯಕ ವ್ಯಕ್ತಿಗಳನ್ನು ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಅಲ್ಲಿ ಕೇವಲ ಮತಗಟ್ಟೆ ಅಧಿಕಾರಿಗಳು ಮತ್ತು ಮತದಾನ ಮಾಡುವವರು ಮಾತ್ರ ಇದ್ದು, ಅವರು ಸರತಿ ಸಾಲಿನಲ್ಲಿ ನಿಂತು ಮುಕ್ತ ಮತ್ತು ನ್ಯಾಯ ಸಮ್ಮತ ಮತ ಚಲಾವಣೆಯಾಗುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಾಗಾರದಲ್ಲಿ ಮೈಕ್ರೋ ಅಬ್ಸರ್ವರ್ ಗಳ ನೋಡಲ್ ಅಧಿಕಾರಿ ವೀರೇಂದ್ರ ಕುಮಾರ್, ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರ್ ವಿದ್ಯಾಧರ ಮೇಘರಾಜ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ ಚುನಾವಣಾ ಸಿಬ್ಬಂದಿ ಭಾಗವಹಿಸಿದ್ದರು.

# ಕುಕನೂರು ಐಟಿಐ ಸಂಸ್ಥೆ: ವಿವಿಧ ವೃತ್ತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಕುಕನೂರಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25 ನೇ ಸಾಲಿಗೆ ಮೆರಿಟ್ ಕಂ ರಿಸರ್ವೇಷನ್ ಆಧಾರಿತ ಪ್ರವೇಶ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ವಿವಿಧ ವೃತ್ತಿಗಳಿಗಳ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ದಿನಾಂಕ:01/08/2024 ರಂತೆ 14 ವರ್ಷ ಮೇಲ್ಪಟ್ಟ ವಯೋಮಿತಿಯು ಕಡ್ಡಾಯವಾಗಿರುತ್ತದೆ. ವೃತ್ತಿಯ ಅನುಸಾರವಾಗಿ 8ನೇ ತರಗತಿ/ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ವಿವಿಧ ತಾಂತ್ರಿಕ/ತಾಂತ್ರಿಕೇತರ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಜೂನ್ 03 ಕೊನೆಯ ದಿನವಾಗಿದ್ದು, www.cite.karnataka.gov.in ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ರಾಜ್ಯದ ಯಾವುದೇ ಸರಕಾರಿ/ಅನುದಾನಿತ ಐಟಿಐ ಗಳಲ್ಲಿ ಅಥವಾ ಇಂಟರ್‌ನೆಟ್ ಕೆಫೆ ಅಥವಾ ಸೈಬರ್ ಸೆಂಟರ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರಕಾರಿ / ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು, ಮೊ.ಸಂ: 9481718859, 9164198246, 9945789400, 9964247098 ಗೆ ಸಂಪರ್ಕಿಸಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಿಮಾಲಯದಲ್ಲಿ ಪುಷ್ಪರಗಳೆ




ಹರಿಹರನ 'ಪುಷ್ಪರಗಳೆ' ಕಾವ್ಯ ಹುಟ್ಟಿದ ಹಂಪಿ ಸೀಮೆಯವನಾದ ನಾನು, ಹಿಮಾಲಯದ ಪುಷ್ಪಕಣಿವೆ ಹೋಗಬೇಕೆಂದು ಬಹುಕಾಲದಿಂದ ತವಿಸುತ್ತಿದ್ದೆ. ಅನೇಕ ಸಲ ಹಿಮಾಲಯ ಚಾರಣಕ್ಕೆ ಹೋದರೂ ಅದೆಂತೊ ಇದು ತಪ್ಪಿಸಿಕೊಳ್ಳುತಿತ್ತು. ನಂದಾದೇವಿ ರಾಷ್ಟ್ರೀಯ ಉದ್ಯಾನದಲ್ಲಿರುವ ಈ ಕಣಿವೆಯ ದರ್ಶನವಿಲ್ಲದೆ ಹಿಮಾಲಯ ಚಾರಣ ಅಪೂರ್ಣ. 12 ವರ್ಷಗಳಿಗೊಮ್ಮೆ ಪಶ್ಚಿಮಘಟ್ಟದಲ್ಲಿ ಮೈದೋರುವ ನೀಲಕುರಿಂಜಿ ತಾನೊಂದೇ ಮೆರೆಯುತ್ತದೆ. ಆದರೆ ಪುಷ್ಪಕಣಿವೆಯಲ್ಲಿ ಅರಳುವುದು 600ಕ್ಕೂ ಹೆಚ್ಚು ಪ್ರಭೇದದ ಹೂಗಳು. ಆಗಸ್ಟ್ ಮೊದಲ ವಾರದಲ್ಲಿ ಬಹುಪಾಲು ಹೂ ಅರಳುತ್ತದೆ. ತುಸು ಮುಂಚೆ ಹೋದರೆ ಇನ್ನೂ ಮೊಗ್ಗು; ಕೊಂಚ ತಳುವಿದರೆ ಹೂವುದುರಿದ ಗಿಡಗಳ ಕೇವಲ ಕಂಕಾಲ ದರ್ಶನ.

ವರ್ಷದಲ್ಲಿ ಹದಿನೈದು ದಿನ ವರ್ಣರಂಜಿತ ಸ್ವರ್ಗವನ್ನು ಸೃಷ್ಟಿಸುವ ಈ ಕೋಮಲ ಹೂಗಳಿರುವುದು ಅತ್ಯಂತ ಕಠಿಣ ಹವಾಮಾನದ ಪರ್ವತಗಳ ಮೇಲೆ. 12000 ಅಡಿ ಎತ್ತರದಲ್ಲಿ. ಅಲ್ಲಿಗೆ ಮುಟ್ಟುವುದೂ ಸರಳವಲ್ಲ. ಬದರಿ ಹಾದಿಯಲ್ಲಿರುವ ಗೋವಿಂದಘಾಟಿನಲ್ಲಿ ಇಳಿದು, 14 ಕಿಮೀ ಗಂಗಾರಿಯಾದ ಬೇಸ್‌ಕ್ಯಾಂಪಿಗೆ ನಡೆಯಬೇಕು. ಅಲ್ಲಿಂದ ಮತ್ತೆ 4 ಕಿಮೀ ಕಠಿಣ ನಡಿಗೆ. ಆದರೆ ಈ ದುರ್ಗಮ ಹಾದಿ ಭೋರ್ಗರೆವ ನದಿ ಮತ್ತು ಜಲಪಾತಗಳ ನಡುವೆ, ತೊಗಟೆ ಸುಲಿದುಕೊಂಡು ನಿಂತ ಭೂರ್ಜ್ವವೃಕ್ಷದ ಕಾಡಿನೊಳಗೆ ಹಾಯುತ್ತದೆ. ರುದ್ರಾನುಭವದ ಚಾರಣ. ಹಾದಿಯುದ್ದಕ್ಕೂ ಬಿಡಿ ಹೂಗಿಡ ಗಾಳಿಗೆ ತಲೆಯಲುಗಿಸಿ ಸ್ವಾಗತಿಸುತ್ತವೆ. ನಾನು ಅವುಗಳಲ್ಲಿ ತಲ್ಲೀನನಾದಾಗೆಲ್ಲ 'ಕಣಿವೆ ಯಲ್ಲಿ ಅಪಾರ ಹೂಗಳಿವೆ. ಮಧ್ಯಾಹ್ನದೊಳಗೆ ಹೂವಿನ ಕಣಿವೆಯನ್ನು ತೊರೆಯಬೇಕು. ಹಿಮಪಾತ ಇಲ್ಲವೆ ಮಳೆಗೆ ಸಿಗಬಹುದು' ಎಂದು ಗೈಡು ಅವಸರಿಸುತ್ತಿದ್ದನು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ಹಿಮಾಲಯದ ಎಲ್ಲ ಚಾರಣಗಳಲ್ಲೂ ಹೂವು ಕಾಣಿಸುತ್ತವೆ. ಯಾರೊ ಮರೆತು ಹೂಗುಚ್ಛ ಬಿಟ್ಟುಹೋದಂತಿದ್ದ ಅವುಗಳ ಪಟಗಳನ್ನು ಹಿಂದೆ ತೆಗೆದಿದ್ದೆ. ಅದರಲ್ಲೂ ಅಡವಿಗೆ ಬೆಂಕಿಬಿದ್ದಂತೆ ಅರಳುವ ಕೆಂಪು ಬುರಾಂಶ್, ನಮ್ಮ ಮುತ್ತುಗವನ್ನು ನೆನಪಿಸುತ್ತದೆ. ಆದರೆ ಹೂಗಣಿವೆಯ ಪರಿಯೇ ಬೇರೆ. ಇಲ್ಲಿ ಹಿಮಾಲಯ ಸೀಮೆಯ ಸಮಸ್ತ ಹೂಗಳು ಮಾತಾಡಿಕೊಂಡು ಪರಿಸೆ ಸೇರುತ್ತವೆ.

ಸುತ್ತ ಗೋಡೆಗಟ್ಟಿದಂತೆ ಪರ್ವತಗಳು. ನಡುವೆ ತೊಟ್ಟಿಲಂತಿರುವ ಪಚ್ಚೆಯ ಹಾಸಿಗೆಯಂತಿರುವ ಹುಲ್ಲುಗಾವಲು. ಅದರೊಳಗೆ ಲಕ್ಷಲಕ್ಷ ಹೂಗಳ ದರಬಾರು. ಹಾದಿಯಲ್ಲಿ ಅಡ್ಡಸಿಗುವ ಪರ್ವತವೊಂದನ್ನು ಹತ್ತಿ ಇಳುಕಲನ್ನು ಇಳಿಯುತ್ತಿದ್ದಂತೆ ಚಕ್ಕನೆ ವಿಶಾಲ ಹೂಗಣಿವೆ ಮೈದೋರುತ್ತದೆ. ಆಗಸದಿಂದ ಹಸಿರು ಹುಲ್ಲಿನ ಮೇಲೆ ಸುರಿದ ಕೆಂಪು ಹಳದಿ ನೀಲಿ ಬಿಳಿ ಅರಿಸಿಣ ರಕ್ತದ ಹನಿಗಳೇ ಅರಳಿದಂತೆ. ಇವನ್ನು 'ವಜ್ರಮುಖವ ಚಾಚಿ ಮುತ್ತುವ' ಸುತ್ತುವ ಸಹಸ್ರಾರು ಜೇನ್ನೊಣಗಳು. (ಹಾದಿಯಲ್ಲಿ ಪರ್ವತಗಳ ಕಲ್ಲು ಛಾವಣಿಗಳಲ್ಲಿ ಕಂಡ ದೊಡ್ಡದೊಡ್ಡ ಜೇನುಹುಟ್ಟುಗಳು ಇವುಗಳ ಕಾಮಗಾರಿಯ ಫಲಗಳು). ಪರ್ವತ ಹುಲ್ಲು ಹೂವು ದುಂಬಿ ಹೊಳೆ ಹಿಮಪಾತ ಚಳಿ ಬಿಸಿಲು ಮಳೆಗಳ ಪರಸ್ಪರ ನಂಟಿನ ಬಹುತ್ವ. ಹೂಗಣಿವೆಯಲ್ಲಿ ಹಿಮಾಲಯದ ವಿಶಿಷ್ಟ ಹೂವಾದ ಬ್ರಹ್ಮಕಮಲವಿಲ್ಲ. ಅದಕ್ಕಾಗಿ ಸನಿಹದಲ್ಲಿರುವ 15000 ಅಡಿ ಎತ್ತರವಿರುವ ಹೇಮಕುಂಡ ಸಾಹೇಬ್ ಗುರುದ್ವಾರಕ್ಕೆ ಹೋಗಬೇಕು. ಶಿಖರಗಳ ತುಂಬ ಹೊಂಗಳಸ ಊರಿದಂತೆ ತಿಳಿಹಳದಿ ಕಮಲ. ಇನ್ನೂ ಪಕಳೆರೆಕ್ಕೆ ಬಿಚ್ಚುತ್ತಿರುವ ದೊಡ್ಡ ಕೋಸುಗಡ್ಡೆ; ಬಾಕುಗಳಂತೆ ಸೆಟೆದ ಗರಗಸದ ಮುಳ್ಳಿನ ಹಸಿರೆಲೆಗಳ ನಡುವೆ ಇಟ್ಟ ಆಕಾಶಬುಟ್ಟಿ. ನಿಂತು ಆಸ್ವಾದಿಸಬೇಕೆಂದರೆ ಮನುಷ್ಯ ಮಾತ್ರರಾದವರು ಸಹಿಸಲಾಗದ ಭೀಕರ ಚಳಿ. ಸದಾ ಮಂಜು. ಸಂಜೆ ಹಿಮಪಾತ. ತಾಪಮಾನ ಶೂನಕ್ಕೆ ಇಳಿಯುತ್ತದೆ. ಅಲ್ಲೂ ಮಧ್ಯಾಹ್ನದ ಹೊತ್ತಿಗೆ ಚಾರಣಿಗರು ಯಾತ್ರಿಗರು ಪರ್ವತವಿಳಿದು ಕೆಳಗೆ ಹೋಗಲೇಬೇಕು.

ಹೇಮಕುಂಡದಲ್ಲಿ ಆಸುಪಾಸಿನ ಹಿಮಗಲ್ಲುಗಳು ಜಿನುಗಿ ಜಲಪಾತಗಳಾಗಿ ಧುಮುಕಿ ನಿರ್ಮಾಣವಾದ ಬೆಳ್ಳಿಯ ಅಚ್ಚೋದ ಸರೋವರವಿದೆ. ಅದು ತುಂಬಿ ನೀರು ಹೊರಚೆಲ್ಲಿ ಹೊಳೆಯಾಗಿ ಕೆಳಕ್ಕೆ ಇಳಿಯುತ್ತದೆ– ದೂರದ ಬಂಗಾಳ ಕೊಲ್ಲಿಯ ಸಹಸ್ರಾರು ಕಿಮೀ ಪಯಣಕ್ಕೆ.

ಹಿಮಾಲಯವೆಂದರೆ ಹಿಮಪರ್ವತ ಶಿಖರ ಕಾಡು ನದಿಗಳ ಸಂಗಮವೆಂದೇ ತಿಳುವಳಿಕೆ. ಆದರೆ ಗಗನಚುಂಬಿ ಶಿಖರಗಳ ಜತೆ ನೆಲಚುಂಬಿ ಹೂಲೋಕವೂ ಇಲ್ಲಿದೆ. ಇವುಗಳ ಚೆಲುವನ್ನು ಕಾಣಲು, ಆಗಸದೊಂದಿಗೆ ಆಟವಾಡುವ ಶಿಖರಗಳನ್ನೂ ದೇವದಾರು ವೃಕ್ಷಗಳನ್ನೂ ಕತ್ತೆತ್ತಿ ನೋಡುವಂತೆ ನಡೆಹಾದಿಯ ಆಜುಬಾಜಿನ ನೆಲವನ್ನೂ ಗಮನಿಸಬೇಕು. ಹಿಮಾಲಯ ಭವ್ಯವೆನಿಸುವುದು ತನ್ನ ಧೀರೋದಾತ್ತ ಶಿಖರಗಳಿಂದ ಮಾತ್ರವಲ್ಲ, ತನ್ನಡಿಯ ಹೂವು ಹುಲ್ಲುಗಳಿಂದ. ಹಿಮಾಲಯದ ಬೃಹತ್ತಿನ ಅಹಮಿಕೆಗೆ ತಿವಿಯಲೆಂದೊ ಶಿಖರಗಳ ಏಕತಾನತೆ ಮುರಿಯಲೆಂದೊ ಅಥವಾ ಸಿಂಗರಿಸಲೆಂದೊ ನಿಸರ್ಗವೇ ಸೃಷ್ಟಿಸಿರುವ ವರ್ಣ ಜಗತ್ತಿದು. ಈ ಜಗತ್ತಿನ ಅಧ್ಯಯನಕ್ಕಾಗಿ ಬಂದು, ಕಾಲುಜಾರಿ ಬಿದ್ದು ನಿಧನಳಾದ ಒಬ್ಬ ಸಸ್ಯವಿಜ್ಞಾನಿಯ ಗೋರಿಯೊಂದು ಅಲ್ಲಿದೆ– ಪುಷ್ಪಪ್ರೇಮವೂ ದುರಂತ ಮರಣವೂ ಒಟ್ಟಿಗೆ ಸಂಭವಿಸಿದಂತೆ. ಆಕೆಯ ಸಮಾಧಿ ಹೂವಿನ ಋತುಮಾನದಲ್ಲಿ ನಿಸರ್ಗವೇ ಸಲ್ಲಿಸುವ ಪುಷ್ಪಾಂಜಲಿಯಂತೆ ಬಿದ್ದಹೂವುಗಳಿಂದ ಮುಚ್ಚಿ ಹೋಗುತ್ತದೆ.

ಹೂವುಗಳೆಲ್ಲ ಉದುರಿದ ಬಳಿಕ ಪುಷ್ಪಕಣಿವೆ ಹಿಮ ಸಮಾಧಿಯಲ್ಲಿ ಧ್ಯಾನಕ್ಕೆ ಸಲ್ಲುತ್ತದೆ. ಮತ್ತೆ ಬೇಸಿಗೆಯ ಬಿಸಿಲಿಗೆ ಹಿಮಕರಗಿ, ಕೊಚ್ಚೆಕೆಸರಿನ ನೆಲದೊಳಗಿಂದ ಉದುರಿದ ಬೀಜಗಳು ಅಂಕುರವಾಗಿ ಗಿಡವಾಗಿ ಹೂತಳೆಯುತ್ತವೆ. ಇದು ಜೀವಸಾವುಗಳ ಕಟುಮಧುರ ಆವರ್ತನ.











# ಮಾನವತೆಯಿಂದ ದೇವತ್ವದೆಡೆಗೆ... ಬುದ್ಧನ ಮಹಾಯಾನ

ಆತ ಹುಟ್ಟಿದ್ದು ರಾಜವಂಶದಲ್ಲಿ. ಕೋಸಲ ರಾಜ್ಯವನ್ನು ಆಳುತ್ತಿದ್ದ ಶಾಖ್ಯ ವಂಶದ ಮಹಾರಾಜ ಶುದ್ಧೋದನ ಆತನ ತಂದೆ, ತಾಯಿ ಮಾಯಾದೇವಿ. ಈತನ ಮೂಲ ಹೆಸರು ಸಿದ್ಧಾರ್ಥ ಗೌತಮ. ರಾಜ ಮನೆತನದಲ್ಲಿ ಹುಟ್ಟಿದ ಸಿದ್ಧಾರ್ಥನ ಜಾತಕವನ್ನು ಪರಿಶೀಲಿಸಿದ ರಾಜ ಪುರೋಹಿತರು ಈತ ಮುಂದೆ ಸರ್ವ ಸಂಗ ಪರಿತ್ಯಾಗಿಯಾಗಿ ಜಗದೋದ್ಧಾರಕನಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿರುವನು ಎಂದು ಹೇಳಿದರು. ಇದರಿಂದ ಚಿಂತಿತನಾದ ರಾಜನು ತನ್ನ ಮಗನಿಗೆ ಯಾವುದೇ ರೀತಿಯ ನೋವು ಸಂಕಟಗಳ ದೃಶ್ಯಾವಳಿಗಳು ಕಣ್ಣಿಗೆ ಬೀಳದಂತೆ ಅರಮನೆಯ ಚಿನ್ನದ ಪಂಜರದಲ್ಲಿ ಸುಖದ ಸುಪ್ಪತ್ತಿಗೆಯ ಮೇಲೆ ಬೆಳೆಸಿದನು. ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದನು. ಪ್ರಾಪ್ತ ವಯಸ್ಕನಾದಾಗ ಯಶೋಧರೆ ಎಂಬ ಕನ್ಯಾಮಣಿಯೊಂದಿಗೆ ವಿವಾಹವನ್ನು ಮಾಡಿದನು. ಆತನ ದಾಂಪತ್ಯದ ಫಲವಾಗಿ ಓರ್ವ ಪುತ್ರ ರಾಹುಲನನ್ನು ಪಡೆದನು. ಇಷ್ಟಕ್ಕೆ ಮುಗಿಯಲಿಲ್ಲ ಆತನ ಜೀವನ ಯಾನ.... ಇಲ್ಲಿಂದ ಆರಂಭವಾಯಿತು ಬುದ್ಧನ ಮಹಾ... ಗಮನ.

ಎಷ್ಟೇ ಅರಮನೆಯ ಕಣ್ಕಾವಲಿನಲ್ಲಿ ಮಗನನ್ನು ಮಹಾರಾಜನು ಬೆಳೆಸಿದರೂ ಒಂದು ದಿನ ರಥದಲ್ಲಿ ಕುಳಿತು ಪ್ರಯಾಣಿಸುವಾಗ ರಾಜಕುಮಾರ ಸಿದ್ಧಾರ್ಥನು ಓರ್ವ ಅತ್ಯಂತ ಕ್ಷೀಣಿಸಿದ ವೃದ್ಧನನ್ನು, ಓರ್ವ ರೋಗಿಯನ್ನು ಮತ್ತು ಒಂದು ಶವಯಾತ್ರೆಯನ್ನು ಕಂಡು ಅವರ್ಯಾರೆಂದು ತನ್ನ ಸಾರಥಿ ಚೆನ್ನನನ್ನು ಕೇಳಿದನು. ಅವರ ಕುರಿತು ಸಾರಥಿ ಚೆನ್ನ ನೀಡಿದ ವಿವರಣೆಯಿಂದ ವಿಚಲಿತನಾದ ಜನನ ಮರಣಗಳ ಚಕ್ರದ ಕುರಿತು ತನಗಿದ್ದ ಸಂದೇಹಗಳನ್ನು ಓರ್ವ ಸನ್ಯಾಸಿಯೊಂದಿಗೆ ಮಾತನಾಡಿ ಬಗೆಹರಿಸಿಕೊಂಡನು.

ಯಾನದ ಪ್ರಥಮ ಪಾದ....ಜರಾ ಮರಣ ಮತ್ತು ದುಃಖಗಳ ಕಾರಣವನ್ನು ಹುಡುಕಲು ನಟ್ಟಿರುಳಿನಲಿ ಅರಮನೆಯನ್ನು ತೊರೆದ ಗೌತಮನು ತಪೋವನಕ್ಕೆ ಬಂದು ಅಲ್ಲಿನ ಸಾಧಕರ ಬಳಿ ತಪೋವನದ ನಿಯಮಗಳನ್ನು ಅರಿತು ಮಗಧ ದೇಶದೆಡೆಗೆ ಪಯಣ ಬೆಳೆಸಿದ. ಯಾನದ ದ್ವಿತೀಯ ಪಾದ... ಕಾಡು ಮೇಡನ್ನದೆ ಬರಿಗಾಲಿನಲ್ಲಿ ನಡೆದ ಗೌತಮ, ಹಸಿವಾದಾಗ ಭಿಕ್ಷಾನ್ನಗಳಿಗೆ ಕೈಯೊಡ್ಡಿದ. ರಾಜಗೃಹವನ್ನು ತೊರೆದಾಗ 29ರ ಹರೆಯದವನಾದ ಗೌತಮನು ಸತತವಾಗಿ ಸಾಧನೆಯ ಹಾದಿಯಲ್ಲಿ ಸಾಗಿ ಅಷ್ಟಕ್ಕೂ ತೃಪ್ತನಾಗದೆ ನಿರಾಹಾರ, ಕಾಯಕ್ಲೇಶಗಳಲ್ಲಿ ತೊಡಗಿ ತನು ಮನವನ್ನು ದಂಡಿಸಿ ಇದಾವುದೂ ಸಾಧನೆಗೆ ಸಹಾಯಕವಲ್ಲ ಎಂಬುದನ್ನು ಅರಿತನು. ಯಾನದ ಮೂರನೆಯ ಪಾದ... ಬೋಧಿವೃಕ್ಷದ ಕೆಳಗೆ ಪದ್ಮಾಸನ ಹಾಕಿ ಕುಳಿತ ಗೌತಮನಿಗೆ ವೈಶಾಖ ಹುಣ್ಣಿಮೆಯ ದಿನ ಸಂಕಲ್ಪ ಸಿದ್ಧಿಯಾಯಿತು. ಸೂರ್ಯೋದಯವಾಗುವುದರೊಳಗೆ ಸಿದ್ಧಾರ್ಥ ನಾಲ್ಕುಜಾವದ ಅನುಭವ ಪಡೆದು ಜ್ಞಾನಯೋಗಿಯಾದನು. ಬುದ್ಧನಾದನು. ಬುದ್ಧ ಎಂದರೆ 'ಜ್ಞಾನದ ಬೆಳಕು' ಎಂದರ್ಥ ಆ **ನಾಲ್ಕು ಜಾವದಲ್ಲಿನ ಅನುಭವಗಳೆಂದರೆ–**



**ಜನ್ಮಾಂತರಗಳ ಅರಿಯುವಿಕೆ,
ನಿತ್ಯಾನಿತ್ಯ ವಸ್ತುಗಳ ವಿವೇಕೋದಯ,
ಜರಾಮರಣಗಳ ದುಃಖಕ್ಕೆ ಕ್ಷಣಿಕ ವಸ್ತುಗಳ ತೃಷೆಯೇ ಕಾರಣ,
ಆಧ್ಯಾತ್ಮ ತತ್ತ್ವದ ಸಾಕ್ಷಾತ್ಕಾರ.
ಇದುವೇ ಆತನ ಜೀವನದ .....ಮಹಾ ಗಮನ.
ಸಾಧನೆಯ ನಾಲ್ಕನೇ ಮಹಾಪಾದ...ಬುದ್ಧನ**

ಸಹನೆ, ಕರುಣೆ ಮತ್ತು ಪ್ರೀತಿಯುತ ಮಾತುಗಳು ಜನರನ್ನು ಬದಲಾಯಿಸಿದವು. ಬುದ್ಧ ಸ್ವತಃ ತನ್ನ ಜೀವನದಲ್ಲಿ ತಾನು ಹೇಳುತ್ತಿದ್ದ ಎಲ್ಲವನ್ನೂ ಅಳವಡಿಸಿಕೊಂಡನು. ಹಸಿದು ಬಂದ ಮಕ್ಕಳಿಗೆ ಊಟ ಕೊಡದೆ ಮಕ್ಕಳಿಗಾಗಿ ಹಂಬಲಿಸಿದ ಮಹಿಳೆಗೆ ತಿಳಿಸಿ ಬುದ್ಧಿ ಹೇಳಿದ ಬುದ್ಧ, ತನ್ನ ಪುಟ್ಟ ಕಂದನನ್ನು ಕಳೆದುಕೊಂಡ ತಾಯಿಗೆ ಸಾವಿಲ್ಲದ ಮನೆಯ ಸಾಸಿವೆ ತರಲು ಹೇಳಿದ ಬುದ್ಧ, ಬೇಟೆಗಾರನಿಂದ ಗಾಯಗೊಂಡ ಹಂಸವನ್ನು ಸಂರಕ್ಷಿಸಿದ ಬುದ್ಧ, ಕಡು ಕ್ರೂರಿ ಅಂಗುಲಿಮಾಲನ ಪರಿವರ್ತಿಸಿದ ಮಹಾ ಜ್ಞಾನಿ ಬುದ್ಧ, ತನ್ನ ಮೇಲೆ ಅತ್ಯಾಚಾರ ಆರೋಪ ಹೊರಿಸಿದ ಮಹಿಳೆಗೆ ಜ್ಞಾನೋದಯವನ್ನುಂಟು ಮಾಡಿದ ಬುದ್ಧ, ಪ್ರಾಣಿ ಹಿಂಸೆ, ನರಬಲಿ, ಸಾಮ್ರಾಜ್ಯ ವಿಸ್ತರಣೆಯ ದಾಹಗಳನ್ನು ನಿವಾರಿಸಿದ ಬುದ್ಧ.....ಹೀಗೆ ಪಾರಸ ಮಣಿ ಸೋಕಿದ ಎಲ್ಲವೂ ಚಿನ್ನವಾಗುವಂತೆ ಬುದ್ಧನ ಪ್ರವಚನಗಳನ್ನು ಆಲಿಸಿದ ಜನರು ತಮ್ಮ ಅಜ್ಞಾನ, ವಿಸ್ಮೃತಿ, ಮೌಢ್ಯಗಳನ್ನು ಕಳೆದುಕೊಂಡು ಶಾಂತಿ, ಸಹನೆ, ಸಹಬಾಳ್ವೆ, ಸಹೋದರತ್ವ ಭಾವಗಳನ್ನು ತಮ್ಮದಾಗಿಸಿಕೊಂಡರು.

ಜೀವನ ಯಶಸ್ವಿಯಾಗಿ ಸಾಕಾರಗೊಳ್ಳಬೇಕಾದರೆ ಎಂಟು ಸನ್ಮಾರ್ಗಗಳಾದ ಸದ್ಭಾವನೆ, ಸತ್ಸಂಕಲ್ಪ, ಸದ್ವಚನ, ಸದ್ವರ್ತನೆ, ಸತ್‌ಶುದ್ಧಿ, ಸದಾಲೋಚನೆ, ಸದಾಂತರ್ಯ ಮತ್ತು ಸದಾಮೋದ ಎಂಬ ಎಂಟು ಸನ್ಮಾರ್ಗಗಳ ಪಾಲಿಸುವಂತೆ ಹೇಳಿರುವ ಬುದ್ಧ ಈ ಮೂಲಕ ಜೀವನದ ಯಶಸ್ಸಿನ ಮೆಟ್ಟಿಲುಗಳನ್ನು ಸುಲಭವಾಗಿ ಹತ್ತಬಹುದು ಎನ್ನುತ್ತಾನೆ.

ನಾವು ನಡೆಯುವ ದಾರಿ ಸರಿಯಾಗಿದ್ದರೆ, ನಾವು ಮಾಡುವ ಕಾರ್ಯ ಸತ್ಯ?ಶುದ್ಧವಾಗಿದ್ದರೆ ಸಾಧನೆಯ ಶಿಖರವೇರಲು ನಮಗೆ ಯಾವುದೇ ಅಡೆತಡೆಗಳು ಉಂಟಾಗಲಾರದು ಎಂಬುದು ಬುದ್ಧನ ಬೋಧನೆಯ ಸಾರ. ಅಹಿಂಸೆಯನ್ನು ಪ್ರತಿಪಾದಿಸಿದ ಬುದ್ಧ ದಾನ ಮಾಡುವುದು, ಸತ್ಯ ಬೋಧನೆ, ಮದ್ಯಪಾನ ಮಾಡದಿರುವುದು ಹಾಗೂ ಶೀಲವಂತರಾಗಿ ಬದುಕುವಂತೆ ಕರೆ ನೀಡಿದನು.

ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಈ ಪಂಚಶೀಲಗಳನ್ನು ಅಳವಡಿಸಿಕೊಂಡರೆ ಈ ಸಮಾಜ ಸುಖ, ಶಾಂತಿ, ನೆಮ್ಮದಿಯಿಂದ ಇರಲು ಸಾಧ್ಯವಿದೆ ಎನ್ನುತ್ತಾನೆ. ಬುದ್ಧ ಓರ್ವ ಐತಿಹಾಸಿಕ ಪುರುಷ. ಇಂದಿನ ನೇಪಾಳ ದೇಶದಲ್ಲಿರುವ ಲುಂಬಿನಿವನದಲ್ಲಿ ಜನಿಸಿ, ಬುದ್ಧ ಗಯಾ ಎಂದು ಹೆಸರಾದ ಗಯಾದಲ್ಲಿ ಜ್ಞಾನೋದಯ ಪಡೆದು ಸಾರಾನಾಥದಲ್ಲಿ ಮೊದಲ ಪ್ರವಚನ ನೀಡಿದನು.

ಬುದ್ಧನಿಗೆ ಜ್ಞಾನೋದಯವಾದ ದಿನ, ಹುಟ್ಟಿದ ದಿನ ಹಾಗೂ ನಿರ್ವಾಣ ಹೊಂದಿದ ದಿನವನ್ನು ಭಾರತಾದ್ಯಂತ 'ಬುದ್ಧ ಪೂರ್ಣಿಮಾ' ಎಂದು ಆಚರಿಸಲಾಗುತ್ತದೆ. ಇದನ್ನು ಕೆಲವು ದೇಶಗಳ ಬುದ್ಧನ ಅನುಯಾಯಿಗಳು ಈ ದಿನವನ್ನು ವೆಸಕ ಎಂದು ಕರೆಯುತ್ತಾರೆ. ವೆಸೆಕ ಎಂದರೆ ಎಪ್ರಿಲ್– ಮೇ ತಿಂಗಳ ಪವಿತ್ರ ದಿನ ಎಂದರ್ಥ. ಹೀಗೆ ಬುದ್ಧ ಮನುಷ್ಯನಾಗಿ ಹುಟ್ಟಿ ತನ್ನ ಆಂತರಿಕ ಯೋಚನೆಗಳಿಂದ ಜೀವನದ ಒಂದೊಂದೇ ಮೆಟ್ಟಿಲುಗಳನ್ನು ಅತ್ಯಂತ ಧ್ಯಾನಪೂರ್ವಕವಾಗಿ ಕೆತ್ತಿ... ಮಾನವತೆಯಿಂದ ದೈವತ್ವದೆಡೆಗೆ ಸಾಗಿದ್ದಾನೆ ಇಂದು ಜಗತ್ತಿನಲ್ಲಿ ಸಹಸ್ರಾರು ವರ್ಷಗಳ ಹಿಂದೆ ಬುದ್ಧನು ನೀಡಿದ ಸಂದೇಶಗಳೇ ಇಂದಿಗೂ ಪಸರಿಸಿವೆ. ಬುದ್ಧನ ಜೀವನವೇ ಸಂದೇಶವಾಗಿ ಪರಿಣಮಿಸಿದೆ.... ಬುದ್ಧನು ಸಾರಿದ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ವಿಶ್ವ ಬಂಧುತ್ವದ ನೆಲೆಯಲ್ಲಿ ಬಾಳಿ ಬದುಕೋಣ ... ಓಂ ನಮೋ ಬುದ್ಧಾಯ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

# ಸಿದ್ಧಾರ್ಥ - ಬುದ್ಧನಾದ - ಪ್ರಬುದ್ಧನಾದ



ವೈಶಾಖ ಮಾಸ ಅಂದರೆ ಅದು ಬಿರು ಬೇಸಿಗೆಯ ಕಾಲ ಸಾಕಪ್ಪೋ ಸಾಕು ಈ ಬಿಸಿಲು ಎಂದು ಹಳಿದು ಬಿಡುತ್ತೇವೆ ಆದರೆ ಈ ವೈಶಾಖವೇ ಮಳೆಯ ಸಿಂಚನಕ್ಕೆ ಇಳೆಯ ಹಸಿರಿಗೆ ಕಾರಣವಾಗುತ್ತದೆ, ಬೇಸಿಗೆಯಲ್ಲಿ ಭೂಮಿ ಕಾದಷ್ಟು ಫಲವತ್ತಾಗುತ್ತದೆ. ಇದೇನು ಬೇಸಿಗೆಯ ಈ ಶಾಖವನ್ನು ಇಷ್ಟು ವರ್ಣಿಸುತ್ತಿದ್ದೀರಲ್ಲಾ ! ಎನ್ನತ್ತೀರಾ, ಈ ವೈಶಾಖಮಾಸ ನನಗೆ ಬಹುವಾಗಿ ಕಾಡುತ್ತಿದೆ ಏಕೆಂದರೆ ಜಗದ ದಾರ್ಶನಿಕರಾದ ಬುದ್ಧ ಬಸವ ಅಂಬೇಡ್ಕರ್ ಖ್ಯಾತ ಕ್ರಿಕೆಟ್ ಆಟಗಾರ ತೆಂಡೂಲ್ಕರ್ ಸಿನಿಮಾರಂಗದ ವರನಟ ಡಾ.ರಾಜ್ಕುಮಾರ್ ಇವರೆಲ್ಲರೂ ಜನಿಸಿದ ಮಾಸವೇ ವೈಶಾಖ ಮಾಸ ಇಂತಹ ಮಹನೀಯರು ಜನಿಸಿದ್ದರಿಂದ ಈ ಮಾಸ ಪ್ರಖರತೆ ಪಡೆಯಿತೋ ಅಥವಾ ಈ ಮಾಸದ ಪ್ರಖರತೆಯಿಂದಾಗಿಯೇ ಇಂತಹ ಪುಣ್ಯಾತ್ಮರು ಜನಿಸಿದರೋ ಇದನ್ನು ಓದುಗರಿಗೇ ಬಿಡುತ್ತೇನೆ. ಇಂದು ಅಗಿ ಹುಣ್ಣಿಮೆ ಇದನ್ನು ಬುದ್ಧ ಪೂರ್ಣಿಮೆ ಎನ್ನುತ್ತಾರೆ ಏಕೆಂದರೆ ಇಂದು ಬುದ್ಧ ಜನಿಸಿದ ದಿನ ಹಾಗು ಆತನಿಗೆ ಜ್ಞಾನೋದಯ ದಿನವೂ ಹೌದು ಹಾಗಾದರೆ ಈ ಪೌರ್ಣಿಮೆಯ ಬೆಳಕಿನಲ್ಲಿ ಬುದ್ದನ ಒಂದಷ್ಟು ವಿಚಾರಗಳನ್ನು ಹಂಚಿಕೊಳ್ಳೋಣ ಬನ್ನಿ..

### ಲುಂಬಿನಿವನದದಲ್ಲಿ ಅರಳಿತು ಸಿದ್ದಾರ್ಥ ಸುಮ

ಕಾಶ್ಯಪ ವಂಶದ ಶುದ್ಧೋದನ ಕಪಿಲವಸ್ತು ಪ್ರಾಂತ್ಯದ ದೊರೆ, (ಈಗ ಅದನ್ನು ಲಾರ್ ಕೋಟ್ ಎನ್ನುತ್ತಾರೆ) ಮಹಾಮಾಯೆ (ಮಾಯಾದೇವಿ) ಇವನ ಮೊದಲ ಮಡದಿ ಯಾದರೆ ಮಹಾಮಾಯೆಯ ತಂಗಿಯಾದ ಪ್ರಜಾಪತಿ ಗೌತಮಿ ಎರಡನೇ ಮಡದಿ. ತುಂಬಾ ವರ್ಷಗಳ ನಂತರ ಮಹಾಮಾಯೆ ಗರ್ಭಧರಿಸಿದಾಗ ಶುದ್ಧೋದನನ ಆನಂದಕ್ಕೆ ಪಾರವೇ ಇರಲಿಲ್ಲ ಚೊಚ್ಚಲ ಹೆರಿಗೆಗೆಂದು ಮಾಯಾದೇವಿ ತನ್ನ ತವರಾದ ದೇವದಾಹಕ್ಕೆ ಹೋಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ ಮಹಾರಾಜ ಮೇಣೆಯಲ್ಲಿ ಆಕೆಯನ್ನು ಕಳಿಸಿಕೊಡುವ ವ್ಯವಸ್ಥೆ ಮಾಡುತ್ತಾನೆ ಆದರೆ ಮಾರ್ಗ ಮಧ್ಯದಲ್ಲಿ ಲುಂಬಿನಿ ವನದ ಸೊಬಗು ಆಕೆಯ ಮನವನ್ನು ಸೆಳೆಯುತ್ತದೆ ತಕ್ಷಣವೇ ಮಾಯಾದೇವಿ ಮೇಣೆಯಿಂದ ಕೆಳಗಿಳಿದು ಲುಂಬಿನ ವನದ ರಮ್ಯ ಸೌಂದರ್ಯವನ್ನು ಆಸ್ವಾದಿಸುತ್ತಿರುವಾಗಲೇ ಹೆರಿಗೆ ನೋವು ಕಾಣಿಸಿಕೊಂಡು ಸೂರ್ಯನಂತ ತೇಜಸ್ಸು ಬನದ ಸೌಂದರ್ಯವೇ ಮೈವೆತ್ತಿ ಬಂದಂತೆ ಗಂಡು ಮಗುವೊಂದು ಜನನವಾಗುತ್ತದೆ. ಆ ಮಗುವೆ ಮುಂದೆ ಜಗ ಬೆಳಗುವ ಬುಧ್ಧನಾಗುತ್ತಾನೆ. ಯುವರಾಜನ ಜನನದ ಸುದ್ದಿ ತಿಳಿಯುತ್ತಿದ್ದಂತೆ ರಾಜಧಾನಿ ಕಪಿಲವಸ್ತುವಿನಲ್ಲಿ ಸಡಗರ ಸಂಭ್ರಮ. ಸಿದ್ದಾರ್ಥ ಎಂದು ನಾಮಕರಣ ಆಗುತ್ತೆ ಆದರೆ ಈ ಸಂಭ್ರಮ ಬಹಳ ದಿನ ಉಳಿಯಲಿಲ್ಲ ಮಹಾರಾಣಿ ಮಾಯಾದೇವಿ ಕಾಯಿಲೆಗೆ ತುತ್ತಾಗಿ ಅಸುನೀಗುತ್ತಾಳೆ ಅಕ್ಕನ ಸಾವಿನ ನಂತರ ಗೌತಮಿಯೇ ತಾಯಿಯಾಗಿ ಸಿದ್ದಾರ್ಥನನ್ನು ಬೆಳೆಸುತ್ತಾಳೆ. ಹಾಗಾಗಿ ತಾಯಿಯಿಲ್ಲ ಎಂಬ ಕೊರಗು ಸಿದ್ದಾರ್ಥ ನಿಗೆ ಕಾಡಲೇ ಇಲ್ಲ ಶಸ್ತ್ರ ಹಾಗು ಶಾಸ್ತ್ರ ವಿದ್ಯ ಪಾರಂಗತನಾದ ಸಿದ್ದಾರ್ಥನಿಗೆ ದಂಡಪಾಣಿ ದೊರೆಯ ಮಗಳಾದ ಯಶೋಧರೆಯೊಂದಿಗೆ ವಿವಾಹವಾಗುತ್ತದೆ. ರಾಹುಲ ಎಂಬ ಗಂಡು ಮಗುವನ್ನು ಪಡೆಯುತ್ತಾನೆ. ಮಗನ ಈ ಸಾಂಸಾರಿಕ ಜೀವನ ಕಂಡು ಶುದ್ಧೋದನ ಆನಂದ ತುಂದಿಲನಾಗುತ್ತಾನೆ. ಲುಂಬಿನಿಯಲ್ಲಿ ಜನಿಸಿದ ಸಿದ್ದಾರ್ಥ ಸುಮ ಕಪಿಲ ವಸ್ತುವಿನಲ್ಲಿ ಪರಿಮಳಿಸುತ್ತದೆ.

### ಸಂಘದೊ0ದಿಗೆ ಸಂಘರ್ಷ

ಗೌತಮನು ನಗರ ಸಂಚಾರಕ್ಕೆಂದು ಚೆನ್ನನೊಂದಿಗೆ ಹೋದಾಗ ಅಲ್ಲಿ ಒಬ್ಬ ಬಿಕ್ಷುಕ, ರೋಗಿ ಹಾಗು ಶವ ಈ ಮೂರು ದೃಶ್ಯಗಳನ್ನು ಕಂಡ ಗೌತಮನಿಗೆ ಐಹಿಕ ಸುಖ ಬೋಗ ಕ್ಷಣಿಕ ಜ್ಞಾನವೊಂದೆ ಶಾಶ್ವತ ಎಂಬ ಸತ್ಯ ತಿಳಿದು ಅರಮನೆ ಮಡದಿ ಮಕ್ಕಳು ಇವರನ್ನೆಲ್ಲಾ ತ್ಯಜಿಸಿ ರಾತ್ರೋ ರಾತ್ರಿ ಕಾಡಿಗೆ ತೆರಳಿದ ಎಂಬ ಕಥೆಯನ್ನು ಓದಿದ್ದೇವೆ ನಾಟಕ ಸಿನಿಮಾಗಳಲ್ಲಿ ನೋಡಿದ್ದೇವೆ ಕೆಲವು ಕೃತಿಗಳಲ್ಲಿ ಓದಿದ್ದೇವೆ. ಈ ವಿಚಾರ ಒಂದು ಕಡೆಯಾದರೆ ಮತ್ತೊಂದೆಡೆ ಸಿದ್ದಾರ್ಥ ಅರಮನೆ ತ್ಯಜಿಸಲು ಬೇರೆಯೇ ಕಾರಣ ಹೇಳುತ್ತಾರೆ ಅದೇನು ಎನ್ನುವುದನ್ನು ನೋಡುವಾ. ಸಿದ್ದಾರ್ಥ ಶಾಕ್ಯ ಸಂಘದ ಸದಸ್ಯನಾದ ಮೇಲೆ ಅಲ್ಲಿ ರೋಹಿಣಿ ನದಿ ನೀರಿನ ಹಂಚಿಕೆಗೆ ಸಂಬಂದಿಸಿದಂತೆ ವಿವಾದ ಹುಟ್ಟಿಕೊಳ್ಳುತ್ತದೆ ರೋಹಿಣಿ ನದಿ ನೀರನ್ನು ಶಾಕ್ಯ ಹಾಗು ಕೋಲಿ ರಾಜ ಮನೆತನದವರು ಬಳಸುತ್ತಿದ್ದರು ಆದರೆ ಮುಂದೆ ಆ ಎರಡು ಮನೆತನಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಈ ನದಿ ನೀರನ್ನು ಮೊದಲು ಯಾರು ಬಳಸಬೇಕು ಎಷ್ಟು ಪ್ರಮಾಣದಲ್ಲಿ ಬಳಸಬೇಕು ಎಂಬ ಪ್ರಶ್ನೆ ವಿವಾದಕ್ಕೆ ಕಾರಣವಾಗಿ ಎರಡು ರಾಜ್ಯಗಳ ಮದ್ಯ ಭೀಕರ ಯುದ್ಧ ಜರುಗುವ ಮಟ್ಟ ತಲುಪುತ್ತದೆ. ಸಂಘದ ಸದಸ್ಯರು ಕೋಲಿ ರಾಜರ ಮೇಲೆ ಯುದ್ದ ಮಾಡಲು ತೀರ್ಮಾನಿಸುತ್ತಾರೆ ಸಂಘದ ಈ ತೀರ್ಮಾನವನ್ನು ವಿರೋದಿಸಿದ ಸಿದ್ದಾರ್ಥ ಹೀಗೆಹೇಳುತ್ತಾನೆ."ಯುದ್ಧದಿಂದ ಯಾವ ಸಮಸ್ಯೆಯೂ ಪರಿಹಾರವಾಗುವುದಿಲ್ಲ ಯುದ್ದ ಸಾರುವುದರಿಂದ ನಮ್ಮ ಉದ್ದೇಶ ಸಾರ್ಥಕವಾಗುವುದಿಲ್ಲ ಅದು ಮತ್ತೊಂದು ಯುದ್ಧಕ್ಕೆ ಬೀಜ ಬಿತ್ತುತ್ತದೆ. ಕೊಂದವನನ್ನು ಕೊಲ್ಲಲು ಮತ್ತೊಬ್ಬನು ಹುಟ್ಟಿಕೊಳ್ಳುತ್ತಾನೆ. ಆಕ್ರಮಿಸಿ ಕೊಂಡವನನ್ನು ಆಕ್ರಮಿಸಲು ಮತ್ತೊಬ್ಬನು ಬರುತ್ತಾನೆ ಖಂಡಿತ: ಲೂಟಿಕೋರನನ್ನು ಲೂಟಿ ಮಾಡಲು ಮತ್ತೊಬ್ಬನು ಸಿದ್ಧನಿರುತ್ತಾನೆ." ಹೀಗೆ ಹೇಳಿದಾಗ ಸಂಘದ ಸದಸ್ಯರು ಈತನ ಮೇಲೆ ಅಪವಾದ ಹೊರಿಸುತ್ತಾರೆ ಸಂಘದ ಸದಸ್ಯನಾಗಿ ಸಂಘದ ನಿರ್ಧಾರವನ್ನು ಸೂಚನೆಯನ್ನು ವಿರೋಧಿಸಿದ್ದೀಯ ಹಾಗಾಗಿ ಸಂಘವು ನಿನ್ನನ್ನು ಯಾವ ರೀತಿಯಿಂದಲಾದರು ಶಿಕ್ಷಿಸಬಲ್ಲದು ಎಂದಾಗ ಸಿದ್ದಾರ್ಥ ತನ್ನ ಕುಟುಂಬಕ್ಕೆ ಶಿಕ್ಷಯಾಗಬಾರದು ಸಂಘಕ್ಕೂ ಕೆಟ್ಟ ಹೆಸರು ಬರಬಾರದೆಂದು ಆಲೋಚಿಸಿ ಕೊನೆಗೆ ತಾನೇ ಸ್ವಯಂ ಪ್ರೇರಣೆಯಿಂದ ಪಾರಿವ್ರಾಜಕ ವ್ರತ ಅಂಗೀರಿಸಿ ಅರಮನೆಯನ್ನು ತೊರೆದು ಸನ್ಯಾಸಿಯಾದ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ ಭಿನ್ನಾಭಿಪ್ರಾಯ ಏನೇ ಇರಲಿ ಒಟ್ಟಿನಲ್ಲಿ ಸಿದ್ಧಾರ್ಥ ಅರಮನೆ ತೊರೆದು ಸನ್ಯಾಸಿಯಾದದ್ದು ಮಾತ್ರ ಸತ್ಯ.



ಎ.ಎಂ.ಪಿ.ವೀರೇಶಸ್ವಾಮಿ
ಕನ್ನಡ ಉಪನ್ಯಾಸಕರು, ಬಳ್ಳಾರಿ

Hampi Times E-paper
SCAN AND READ

### ಸಿದ್ದಾರ್ಥ ಬುದ್ಧನಾದ ಪ್ರಬುದ್ದನಾದ

ಅರಮನೆ ತೊರೆದ ಸಿದ್ದಾರ್ಥ ಹಗಲು ರಾತ್ರಿ ಎನ್ನದೆ ಕಾಡನ್ನು ಅಲೆದ ದೇಹ ದಂಡಿಸಿದ ಭೃಗು ಮುನಿಯ ಸಲಹೆಯಂತೆ ಭೋದಿವೃಕ್ಷದ ಕೆಳಗೆ ಕುಳಿತು ಕಠಿಣ ತಪಸ್ಸು ಮಾಡಿದ ಮಳೆ ಚಳಿ ಬಿಸಲು ಯಾವುದನ್ನು ಲೆಕ್ಕಿಸದೆ ದೇಹ ದಂಡಿಸಿದ ಗೌತಮನ ಸತತ ಆರು ವರ್ಷಗಳ ಈ ಸಾದನೆಯ ಫಲವಾಗಿ ಸಿದ್ದಾರ್ಥನ ಮನದಲ್ಲಿ ಬಹುದಿನದಿಂದ ಕಾಡುತ್ತಿದ್ದ : ಪ್ರತಿಯೊಬ್ಬ ಮನುಷ್ಯನೂ ಅನುಭವಿಸುತ್ತಿರುವ ನೋವು ಮತ್ತು ದುಃಖಕ್ಕೆ ಕಾರಣವೇನು? ಈ ನೋವನ್ನು ಪರಿಹರಿಸುವ ಮಾರ್ಗ ಯಾವುದು? ಈ ಪ್ರಶ್ನೆಗಳಿಗೆ ಉತ್ತರ ದೊರೆಯಿತು. ಈ ಜ್ಞಾನ ದೊರೆತದ್ದು ಇದೇ ವೈಶಾಖ ಮಾಸದ ಪೂರ್ಣಿಮೆಯಂದು. ಅಂದಿನಿಂದ ಸಿದ್ದಾರ್ಥ ಪರಿಪೂರ್ಣನಾದ... ಈ ಜಗತ್ತಿಗೆ ಭೋದಿಸಿದ ಆರ್ಯ ಸತ್ಯಗಳಿಂದ ಬುದ್ದನಾದ ಅಷ್ಟಾಂಗ ಮಾರ್ಗಗಳ ತಿಳಿದು ತಿಳಿಸುವ ಮೂಲಕ ಪ್ರಬುದ್ದನಾದ..

### ಬುದ್ಧನ ಬೋಧನೆಗಳು

ಬುದ್ಧನು 'ಬೌದ್ಧ ಧರ್ಮದ ಸ್ಥಾಪಕ' ಎನ್ನುವುದು ಜನಜನಿತವಾಗಿರುವ ಸಂಗತಿಯಾದರೂ ಅವನು ಬೋಧಿಸಿದ್ದು ದುಃಖದಿಂದ ಹೊರಬರುವ ಮಾರ್ಗವನ್ನು ಮಾತ್ರ. ಇದನ್ನೆ ಅವನು ಪಾಲಿ ಭಾಷೆಯಲ್ಲಿ "ಧಮ್ಮ" ಎಂದು ಕರೆದನು. ತಾನು ಬೊಧಿಸುತ್ತಿರುವುದರಲ್ಲಿ ಹೊಸದೇನೂ ಇಲ್ಲವೆಂದೂ ಹಾಗೂ ಈ ಸತ್ಯವನ್ನು ಕಂಡುಕೊಂಡವರಲ್ಲಿ ತಾನು ಮೊದಲನೆಯವನೂ ಅಲ್ಲ, ಕೊನೆಯವನೂ ಅಲ್ಲವೆಂದು ಸಾರಿದನು. ಯಾರು ಬೇಕಾದರೂ ಈ ಮಾರ್ಗವನ್ನು ಅನುಸರಿಸಿ ದುಃಖದಿಂದ ಮುಕ್ತರಾಗಬಹುದು ಮತ್ತು ತನ್ನಂತೆ ಎಚ್ಚರದ ಸ್ಥಿತಿಯನ್ನು ಹೊಂದಬಹುದು. ಆದರೆ ಈ ಸಿದ್ಧಿಗೆ ಸ್ವಂತ ಪ್ರಯತ್ನ, ಸಾಧನೆ ಮಾತ್ರ ಕಾರಣ ಎಂದು ಹೇಳಿದ. ಸತತ ಎಚ್ಚರದ ಸ್ಥಿತಿಯನ್ನು ಸಾಧಿಸಿದ ಯಾರನ್ನೂ ಬೇಕಾದರೂ ಬುದ್ಧನೆಂದು ಕರೆಯಬಹುದು. ಬುದ್ಧ ಎಂದರೆ ನಿದ್ದೆಯಿಂದ ಎದ್ದವನು, ಜಾಗೃತನಾದವ, ಜ್ಞಾನಿ, ವಿಕಸಿತ, ಎಲ್ಲವನ್ನು ತಿಳಿದವನು ಎಂದರ್ಥ. ಬುದ್ಧ ಎಲ್ಲರಿಗೂ ಸಂಜೀವಿನಿಯಂಥ ಮಾಹಿತಿ ನೀಡಿದ ಮಹಾತ್ಮ. "ಆಸೆಯೇ ದುಃಖಕ್ಕೆ ಮೂಲ" ಎಂಬುದು ಅವನ ಪ್ರಸಿದ್ಧ ತತ್ವ. ಬುಧ್ಧ ಧಮ್ಮೋಪದೇಶಗಳನ್ನು ಜನಸಾಮಾನ್ಯರಿಗೆ ನೀಡುವ ಮೂಲಕ ಮಾನವನ ದುಃಖ ನಿವಾರಣೆಗೆ ತ್ರಿಸರಣ ಬೋಧನೆ ಮಾಡಿದರು. ಈ ಮೂರು ಬೌದ್ಧ ಧಮ್ಮದ ಮೂಲ ಸಂಕೇತಗಳು. ಇವುಗಳನ್ನು ಪ್ರತಿಯೋಬ್ಬರ ಜೀವನಧ್ಯೇಯಗಳಾಗಿ ಒಪ್ಪಿಕೊಂಡು ಸಂತೋಷವಾಗಿರಬಹುದು. ಅವುಗಳೆಂದರೆ, ಬುದ್ಧಂ ಶರಣಂ ಗಚ್ಛಾಮಿ (ನಾನು ಬುದ್ಧನಿಗೆ ಶರಣಾಗುತ್ತೇನೆ.) ಧಮ್ಮಂ ಶರಣಂ ಗಚ್ಛಾಮಿ (ನಾನು ಧಮ್ಮಕ್ಕೆ ಶರಣಾಗುತ್ತೇನೆ.) ಸಂಘ0 ಶರಣಂ ಗಚ್ಛಾಮಿ(ನಾನು ಸಂಘಕ್ಕೆ ಶರಣಾಗುತ್ತೇನೆ.) ಗಚ್ಛಾಮಿ ಎಂದರೆ, ಸತ್ಯದಿಂದ ಬೌದ್ಧ ಧಮ್ಮ ಸ್ವೀಕರಿಸುತ್ತೇನೆ ಎಂದು ಅರ್ಥೈಸುತ್ತದೆ. ಈ ಮೂರು ಶರಣ್ಯಗಳನ್ನು ಉಪಾಸಕರು ಮೂರು ಬಾರಿ ಉಚ್ಚರಿಸುವ ಮೂಲಕ ತಾವು ಬೌದ್ಧ ಧಮ್ಮಾಚಾರಿಗಳೆಂದು ಘೋಷಿಸುತ್ತಾರೆ.: ಬುದ್ಧನು ದೇವರಲ್ಲ, ದೇವದೂತನೂ ಅಲ್ಲ, ಮತ್ತು ಇತನು ದೈವಸಂಭೂತನೂ ಅಲ್ಲ ಆದರೆ ತನ್ನ ಸ್ವಸಾಮಾರ್ಥ್ಯದಿಂದ, ಅತ್ಯುನ್ನತ ಜ್ಞಾನ ಪಡೆದು ಜಗತ್ತಿನ ಪರಮ ಸತ್ಯವನ್ನು ಬೋಧಿಸಿದ ಮಹಾಗುರು. ಮದ್ಯಮ ಮಾರ್ಗದ ಮೂಲಕ ಮೈತ್ರಿ, ಕರುಣೆ, ದಯೆ, ಸಮತೆ, ಪ್ರೀತಿ, ಅನುಕಂಪ, ಮತ್ತು ಜ್ಞಾನದೊಂದಿಗೆ ಅಷ್ಟಾಂಗ ಮಾರ್ಗಗಳನ್ನು ತೋರಿಸಿಕೊಟ್ಟರು. ಈ ಸತ್ಯ ವನ್ನು ನಾವು ಪರಿಪಾಲಿಸಿದರೆ ಸಮ್ಮ ಜೀವನದಲ್ಲಿ ಬುದ್ಧತ್ವವನ್ನು ಪಡೆಯಬಹುದು. ಬುದ್ಧರು ಧಮ್ಮವನ್ನು ಜೀವನ ಮಾರ್ಗವೆಂದು ಹೇಳಿದ್ದಾರೆ. ಪರಿಶುದ್ದವಾದ ಜೀವನ ನಡೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದರಿಂದ ದುಖ್ಖ ನಿವಾರಣೆ ಸಾದ್ಯ. ಧಮ್ಮ ಎಂದರೆ ಇತರೆ ಧರ್ಮಗಳಲ್ಲಿರುವಂತೆ ಅದು ತತ್ವಶಾಸ್ತ್ರವಲ್ಲ. ಇದು ಎಲ್ಲರಿಗೂ ಮುಕ್ತವಾದ ರೀತಿಯಲ್ಲಿ ತೋರುವ ಸತ್ಯದ ಬೆಳಕು ಈ ಬೆಳಕಿನಲ್ಲಿ ಜೀವನ ಸಾಕ್ಷಾತ್ಕಾರವನ್ನು ಪಡೆಯಬಹುದು. ಮನುಷ್ಯರು ಮನಸ್ಸಿನ ಶುದ್ಧಿ ಮತ್ತು ಅಂತರ್ ದೃಷ್ಟಿಯಿಂದ ಅಂತಿಮವಾಗಿ ನಿಬ್ಬಾಣ ( ನಿರ್ವಾಣ) ಹೊಂದಬಹುದು. ಬುದ್ಧರ ಉಪದೇಶಗಳು ಜ್ಞಾನ ಮಾರ್ಗವನ್ನು ಬೋಧಿಸಿದೆ. ಧಮ್ಮ ಮಾರ್ಗವನ್ನು ಉಪಾಸಕರು ಮತ್ತು ಬೌದ್ಧ ಭಿಕ್ಕುಇಬ್ಬರು ಅನುಸರಿಸಲು ತಿಳಿಸಲಾಗಿದೆ. ಸಂಪೂರ್ಣ ಮುಕ್ತಿ ಮಾರ್ಗ ಸಿದ್ಧಿಗೆ ಭಿಕ್ಕುಗಳ ಮತ್ತು ಸಂಘಗಳ ಜೀವನ ನಡವಳಿಕೆಗೆ ಸಂಬಂಧಿಸಿದಂತೆ ತ್ರಿಪಿಠಕಗಳನ್ನು ಭೋಧಿಸಿದ್ದಾರೆ.

**ಅವುಗಳೆಂದರೆ:** 1.ವಿನಯ ಪಿಟಕ: ಭಿಕ್ಕು ಮತ್ತು ಭಿಕ್ಕು ಸಂಘಗಳ ನಡವಳಿಕೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಕ್ರೋಢೀಕರಿಸಲಾದ ಗ್ರಂಥವಾಗಿದೆ. 2.ಸುತ್ತ ಪಿಟಕ: ನಾಲ್ಕು ಆರ್ಯ ಸತ್ಯಗಳಿಗೆ ಸಂಬಂಧಿಸಿದಂತೆ ಅನೇಕ ಸಂಭಾಷಣೆಗಳು, ಗೀತೆಗಳು, ಕಥೆ ಉಪಕಥೆಗಳು ಮುಂತಾದವುಗಳನ್ನು ಸಂಗ್ರಹಿಸಿದ ಗ್ರಂಥವಾಗಿದೆ. 3. ಅಭಿಧಮ್ಮ ಪಿಟಕ : ಸುತ್ತ ಪಿಟಕದಲ್ಲಿನ ಬೋಧನೆಗಳನ್ನು ಮೂಲ ತತ್ವಗಳನ್ನು ವಿಶದೀಕರಿಸಿದ ಗ್ರಂಥವಾಗಿದೆ. ಬೌದ್ಧ ಸಂಘಗಳು ಬುದ್ಧನ ಕಾಲದಿಂದಲು ಸ್ಥಾಪಿಸಲ್ಪಟ್ಟಿದ್ದರು ಅವುಗಳಿಗೆ ನಿಜವಾದ ಮಾರ್ಗ ಸೂಚಿ ಇರಲಿಲ್ಲ ಭಗವಾನ್ ಬುದ್ಧರು ತಮ್ಮ ಭೋಧನೆಯ ಮಾರ್ಗದಿಂದ ಸಂಘದ ಮಾರ್ಗ ಸೂಚಿ ತಿಳಿಸಿದರು. ಇಂತಹ ಭಿಕ್ಕು ಸಂಘಗಳು ಇಂದಿಗೂ ಬರ್ಮಾ, ಥೈಲ್ಯಾಂಡ್, ಶ್ರೀಲ0ಕಾ, ಕ್ಯಾಂಬೋಡಿಯಾ, ಲಾವೋಸ್, ಚಿತ್ತಗಾಂಗ್, ಜಪಾನ್, ಚೀನಾ, ಟಿಬೆಟ್ ಹೀಗೆ ಪ್ರಪಂಚದ ನಾನಾ ಕಡೆ ಅಸ್ತಿತ್ವದಲ್ಲಿದ್ದು ಧರ್ಮ ಪ್ರಚಾರ ಮಾಡುತ್ತಿವೆ, . ಬೌದ್ಧ ಭಿಕ್ಕು ಮತ್ತು ಭಿಕ್ಕಿಣಿ ಸಂಘಗಳು ಅಮೆರಿಕಾ, ರಷ್ಯ, ಕೆನಡ, ಪ್ರಾನ್ಸ್ ,ಜರ್ಮನ್ ರಾಷ್ಟ್ರಗಳಲ್ಲಿ ಕೂಡ ಧಮ್ಮದ ಉನ್ನತಿಗಾಗಿ ಸೇವೆ ಮಾಡುತ್ತಿವೆ.

### ಬುದ್ಧನ ಸಮಾಧಿಯದು ಮಾನವ ಹೃದಯ

ಸುಮಾರು 80 ವರ್ಷಗಳ ಕಾಲ ಜೀವಿಸಿದ್ದ ಬುದ್ದ ತನ್ನ ಜೀವಿತಾವಧಿ ಪೂರ್ತಿ ಲೋಕ ಕಲ್ಯಾಣಕ್ಕಾಗಿ ತನ್ನ ಜೀವನವನ್ನು ತ್ಯಾಗ ಮಾಡಿದ ಮಹಾಸಂತ ಸತ್ಯ ಶಾಂತಿ ಹಾಗು ಅಹಿಂಸೆಗಳಿಂದ ಮಾತ್ರ ಮಾನವ ಪ್ರೀತಿ ಹಾಗು ನೆಮ್ಮದಿಯಿಂದ ಜೀವಿಸಲು ಸಾದ್ಯ ಎಂದು ಹೇಳಿದ ಆದರೆ ಇಂದು ಆದುನಿಕ ಪ್ರಪಂಚ ಎತ್ತ ಸಾಗುತ್ತಿದೆ ? ದಿನ ಬೆಳಗಾದರೆ ಹಿಂಸೆ ಕಳ್ಳತನ ವ್ಯಭಿಚಾರ ಕೋಮ ಗಲಭೆ ಈ ದಳ್ಳುರಿಯಲ್ಲಿ ಪ್ರಪಂಚ ಹೊತ್ತಿ ಉರಿಯುತ್ತಿದೆ. ಇಂತಹ ವಿಷಮ ಲೋಕಕ್ಕೆ ಬುದ್ಧ ಏಸು ಪೈಗಂಬರ್ ಬಸವ ಗಾಂಧಿ ಅಂಬೇಡ್ಕರ್ ಇವರ ಆದರ್ಶಗಳು ಅತಿ ಅಗತ್ಯ ಮತ್ತು ಅನಿವಾರ್ಯವಾಗಿವೆ ಜಗತ್ತಿನಲ್ಲಿ. ವಿಜ್ಞಾನ ಬೆಳದಿದೆಯೇ ಹೊರತು ಮನುಷ್ಯನ ಮನದಲ್ಲಿ ಪರಿಜ್ಞಾನ ಬೆಳೆದಿಲ್ಲ. ಅಂತರ್ಜಾಲ ಬೆಳೆದಷ್ಟು ಅಂತಃಕರುಣೆ ಬೆಳೆಯಲಿಲ್ಲ ಹಾಗಾಗಿಯೇ ಈ ಎಲ್ಲಾ ಅನಾಹುತಕ್ಕೆ ಕಾರಣವಾಗುತ್ತಿವೆ. ಜಗವೆಲ್ಲ ಮಲಗಿದಾಗ ಬುದ್ಧ ಎದ್ದಿದ್ದ ಆದರೆ ಇಂದು ಬುದ್ದನ ತತ್ವಗಳನ್ನು ಜನರು ತೊಟ್ಟಿಲಲ್ಲಿ ಮಲಗಿಸಿ ತಾವು ಎದ್ದಿದ್ದಾರೆ ಅವರಿವರೊಡನೆ ಗುದ್ದಾಡಲು ಜಾತಿ ಧರ್ಮ ಗಳ ಸಂಕೋಲೆಯಲ್ಲಿ ಬಿದ್ದು ಒದ್ದಾಡಲು. ವಿಶ್ವದ ಶಾಂತಿ ಕದಡುತ್ತಿರುವ ಈ ಕಾಲದಲ್ಲಿ ಬುದ್ಧನ ತತ್ವಗಳು ಸಕಲರಿಗೂ ಸಂಜೀವಿನಿಯಾಗಲಿ ಬುದ್ಧಪೌರ್ಣಿಮೆಯ ಬೆಳದಿಂಗಳು ಅಜ್ಞಾನದ ಕತ್ತಲೆಯನ್ನು ಓಡಿಸಲಿ ಬುದ್ಧನ ತತ್ವಗಳು ಮಾನವ ಹೃದಯದಲ್ಲಿ ಸಮಾಧಿಯಾಗದೆ ಸದಾ ಜಾಗೃತವಾಗಿರಲಿ.

ಕವಿ ಮನಸು

## ನಗುವ ಬುದ್ಧ




ಆಸೆಯೇ ದುಃಖಕ್ಕೆ ಮೂಲವೆಂದ ಗೌತಮ ಬುದ್ಧ.
ಅದನ್ನೇ ಬಂಡವಾಳ ಮಾಡಿಕೊಂಡು ಮನುಜ ಗೆದ್ದ.
ದಾನ ಧರ್ಮಗಳೇ ಜೀವನದ ಶ್ರೇಷ್ಠತೆ ಎಂದ ಬುದ್ಧ.
ಕೂಡಿಡುವುದರಲ್ಲಿ ತೃಪ್ತಿಯನ್ನು ಮಾನವ ಅರಸಿದ್ದ.

ಹಿಂಸೆಯನ್ನು ತ್ಯಜಿಸುವುದೇ ಧರ್ಮದ ಸಾರವೆಂದ.
ಹಿಂಸೆಯಲ್ಲೇ ಆನಂದವನ್ನು ಇವನು ಹುಡುಕಿ ಬಂದ.
ಲೌಕಿಕ ಜೀವನದ ಆಸೆ ಸುಖ ಭೋಗಗಳನ್ನು ತೊರೆದ.
ಪಾರಮಾರ್ಥದ ಸಾಧನೆಯ ಕಡೆಗೆ ಬುದ್ಧನು ನಡೆದ.

ಅಧಿಕಾರ ಅಂತಸ್ತು ಮೋಹಗಳ ಬುದ್ಧ ತೊರೆದ,
ನಗುವಬುದ್ಧನಿಂದ ಸಿರಿ ಸಂಪತ್ತು ಬರುವುದೆಂದು,
ಮನುಷ್ಯ ಬುದ್ಧನನ್ನು ಮನೆಯೊಳಗೆ ಹೊತ್ತು ತಂದ.
ಆಸೆಯಲ್ಲಿ ಮುಳುಗಿದವರ ನೋಡಿತಾ ನಕ್ಕ ಬುದ್ಧ.

– ಮಮತಾ ಶೃಂಗೇರಿ

## ತುಂಗಭದ್ರಾ ಡ್ಯಾಂ



ಹರಿಯುವ ನದಿಯು ಚಂದ
ನದಿಯ ನೀರು ಅಂದ
ಸಿಹಿಯಾದ ನೀರು ಇರುವ
ತುಂಗಾ ಭದ್ರಾ ಚಂದ।

ತುಂಗಭದ್ರಾ ಡ್ಯಾಂ ಚಂದ
ಡ್ಯಾಂ ಮಿನ ನೋಟ ಅಂದ
ಡ್ಯಾಂ ನಿಂದ ಬೀಳೋ ನೀರು
ಕಣ್ಣಿಗೆ ನೋಡಲು ಚೆಂದ।

ಈ ಕಡೆ ಇಂದ್ರ ಚಂದ
ಆ ಕಡೆ ವೈಕುಂಠ ಅಂದ
ಎರಡರ ನಡುವೆ ಇರುವ
ನಮ್ಮ ಕೈಲಾಸ ಚಂದ।

ಗುಲಾಬಿಯ ಹೂವು ಚಂದ
ಹೂವಿನ ವಾಸನೆ ಅಂದ
ಹೂವಿಗೆ ಮಧುರ ಕೊಡುವ
ನಮ್ಮ ಪಂಪಾವನ ಚಂದ।

ಡ್ಯಾಂ ಮಿನ ರಸ್ತೆ ಚಂದ
ರಸ್ತೆಯ ಸುತ್ತು ಅಂದ
ರಸ್ತೆಯಿಂದ ಸುತ್ತಿ ಬರುವ
ನಮ್ಮ ವಾಹನ ಚಂದ।

ಡ್ಯಾಂ ಮಿನ ಮನೆಯು ಚಂದ
ಮನೆಯಲಿ ಮಕ್ಕಳು ಅಂದ
ಮಕ್ಕಳು ಆಡಿ ನಲಿವ
ನಮ್ಮ ಮನೆಯು ಚಂದ।

– ಚಂದ್ರಶೇಖರಯ್ಯ ರೋಣದಮಠ

## ಫ್ಯಾಶನ್ ಡಿಸೈನ್ ಕೋರ್ಸ್‌ಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಬಳ್ಳಾರಿಯ ಜಿ.ಆರ್.ಟಿ.ಡಿ.ಸಿ ಸಂಸ್ಥೆಯಲ್ಲಿನ ಬಿ.ಎಸ್‌ಸಿ ಪ್ರಥಮ ವರ್ಷದ ಫ್ಯಾಶನ್ ಡಿಸೈನ್ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2024-25ನೇ ಶೈಕ್ಷಣಿಕ ವರ್ಷದ ಪ್ರಥಮ ಬಿ. ಎಸ್‌ಸಿ(ಗಾರ್ಮೆಂಟ್ಸ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ) ವೃತ್ತಿಪರ ಪದವಿ ಕೋರ್ಸ್ ಪ್ರವೇಶಾತಿಗಾಗಿ ಯಾವುದೇ ಪಿ.ಯು.ಸಿ(ಕಲೆ, ವಾಣಿಜ್ಯ, ವಿಜ್ಞಾನ, ಶಿಕ್ಷಣ ಮತ್ತು ಯಾವುದೇ ಡಿಪ್ಲೊಮಾ) ವಿಭಾಗದಲ್ಲಿ ತೇರ್ಗಡೆ ಹೊಂದಿರುವ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ ಹಾಗೂ ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಪ್ರಾಂಶುಪಾಲರು, ಜಿ.ಆರ್.ಟಿ.ಡಿ.ಸಿ ಕಾಲೇಜ್, ಜಿಲ್ಲಾ ಕ್ರೀಡಾಂಗಣ ಮೈದಾನ ರಸ್ತೆ, ಮೊದಲನೇ ರೈಲ್ವೇ ಗೇಟ್ ಹತ್ತಿರ, ನಲ್ಲಚೆರವು, ಬಳ್ಳಾರಿ ಇವರಿಗೆ ಮೇ 30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ : 9741264655 ಗೆ ಸಂಪರ್ಕಿಸಿ.

## ಐಟಿಐ ವೃತ್ತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಕುಕನೂರಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024-25 ನೇ ಸಾಲಿಗೆ ಮೆರಿಟ್ ಕಂ ರಿಸರ್ವೇಷನ್ ಆಧಾರಿತ ಪ್ರವೇಶ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ:01/08/2024 ರಂತೆ 14 ವರ್ಷ ಮೇಲ್ಪಟ್ಟ ವಯೋಮಿತಿಯು ಕಡ್ಡಾಯವಾಗಿರುತ್ತದೆ. ವೃತ್ತಿಯ ಅನುಸಾರವಾಗಿ 8ನೇ ತರಗತಿ/ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ವಿವಿಧ ತಾಂತ್ರಿಕ/ತಾಂತ್ರಿಕೇತರ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.ಅರ್ಜಿ ಸಲ್ಲಿಸಲು ಜೂನ್ 03 ಕೊನೆಯ ದಿನವಾಗಿದ್ದು, www.cite.karnataka.gov.in ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ರಾಜ್ಯದ ಯಾವುದೇ ಸರಕಾರಿ/ಅನುದಾನಿತ ಐಟಿಐ ಗಳಲ್ಲಿ ಅಥವಾ ಇಂಟರ್‌ನೆಟ್ ಕೆಫೆ ಅಥವಾ ಸೈಬರ್ ಸೆಂಟರ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9481718859, 9164198246, 9945789400, 9964247098 ಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**23–05–2024 – ಗುರುವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ವಿಶಾಖ |
| ಯೋಗ | : ಪರಿಘ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:43:59 |
| ಸೂರ್ಯಾಸ್ತ | : 19:03:42 |
| ರಾಹು | : 14:04–15:44 |
| ಯಮಘಂಡ | : 05:44–07:24 |
| ಗುಳಿಕ | : 09:04–10:44 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 22–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.51 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.380 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.1 ಅಡಿ |
| ಒಳ ಹರಿವು | 580 ಕ್ಯುಸೆಕ್ |
| ಹೊರ ಹರಿವು | 178 ಕ್ಯುಸೆಕ್ |
| ಸಾಮರ್ಥ್ಯ | 4.048 ಟಿಎಂಸಿ |

# ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಡಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮೇ 26 ರಂದು ನಗರದ 02 ಕೇಂದ್ರಗಳಲ್ಲಿ ಜೆಇಇ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ–ಮುತ್ತ 200 ಮೀಟರ್ ಒಳಗಿನ ಆವರಣವನ್ನು ಸಿಆರ್‌ಪಿಸಿ ಕಲಂ 144ರ ಮೇರೆಗೆ ನಿಷೇಧಾಜ್ಞೆ ಜಾರಿಗೊಳಿಸಿಜಿಲ್ಲಾದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ನಗರದ ಬಿಐಟಿಎಂ ಕಾಲೇಜು ಮತ್ತು ಕಿಷ್ಕಿಂದ ವಿಶ್ವವಿದ್ಯಾಲಯ ಕೇಂದ್ರಗಳಲ್ಲಿ ಜೆಇಇ ಪರೀಕ್ಷೆಗಳು ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಹಾಗೂ ಮಧ್ಯಾಹ್ನ 02.30 ರಿಂದ ಸಂಜೆ 05.30 ರವರೆಗೆ ನಡೆಯಲಿವೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಒಳಗಿನ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿದ್ದಾರೆ. ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ ಹಾಗೂ ಬೆಳಿಗ್ಗೆ 08 ರಿಂದ ಸಂಜೆ 06 ರ ವರೆಗೆ ಪರೀಕ್ಷಾ ಕೇಂದ್ರಗಳ ಸುತ್ತ–ಮುತ್ತಲಿನ ಝೆರಾಕ್ಸ್ ಅಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

# ಮೇ 24 ರಂದು "ವಿಶ್ವ ಸ್ಕಿಜೋಫ್ರೇನಿಯ ದಿನಾಚರಣೆ" ಅಂಗವಾಗಿ ಜಾಗೃತಿ ಜಾಥ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವಸ್ಕಿಜೋಫ್ರೇನಿಯ ದಿನಾಚರಣೆ" ಅಂಗವಾಗಿ ಮೇ 24 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಯವರು ತಿಳಿಸಿದ್ದಾರೆ.

# ಪುರಸಭೆಯ ಆಡಳಿತಕ್ಕೆ ಜನ ಬೇಸರ

## ಅನಧಿಕೃತ ನೆಪದಲ್ಲಿ ಡಬಲ್ ಟ್ಯಾಕ್ಸ್ ವಸೂಲಿ ನಿಲ್ಲಿಸಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕು ಕೇಂದ್ರ ಪುರಸಭೆಯಾಗಿ ಭಡ್ತಿಯಾಯಿತೆಂದು ಪಟ್ಟಣದ ನಿವಾಸಿಗಳಿಗೆ ಸಂತೋಷಕ್ಕಿಂತ ದುಃಖವೇ ಹೆಚ್ಚಾಗಿದೆ ಎಂದು ಪುರಸಭೆ ಸದಸ್ಯ ಮರಿರಾಮಪ್ಪ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಕಚೇರಿ, ತಾ.ಪಂ. ಹಾಗೂ ಪುರಸಭೆ ಆಡಳಿತಗಳಿಗೆ, ಪಟ್ಟಣದ ಸಾರ್ವಜನಿಕರ ಪರವಾಗಿ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಪಟ್ಟಣದಲ್ಲಿನ ಸಾರ್ವಜನಿಕರು ಸುಮಾರು 60ವರ್ಷಗಳಿಂದಲೂ ವಾಸವಾಗಿದ್ದಾರೆ. ಅಲ್ಲದೆ, ಗ್ರಾ.ಪಂ.ಆಡಳಿತದಲ್ಲಿ ಅಧಿಕೃತವಾಗಿ ಅನುಭವಿಸುತ್ತಿರುವ ನಿವೇಶನ, ಕಟ್ಟಡಗಳಿಗೆ 9 ಮತ್ತು 11 ಫಾರಂಗಳನ್ನು ಪಡೆಯುವ ಮೂಲಕ ಬ್ಯಾಂಕ್ ಸೇರಿದಂತೆ ಇತರೆ ವ್ಯವಹಾರದಲ್ಲೂ ಆಸ್ತಿಗಳನ್ನು ತೊಡಗಿಸಿದ್ದಾರೆ. ಆದರೆ, ಇತ್ತೀಚಿಗೆ ಪುರಸಭೆಯಲ್ಲಿ ಫಾರಂ–3 ತೆಗೆದುಕೊಳ್ಳಲು ಮುಂದಾದರೆ



ಅವುಗಳಿಗೆ ಅನಧಿಕೃತವೆಂದು ನೊಂದಾಯಿಸುವ ಜೊತೆಗೆ, ಇದೇ ನೆಪದಲ್ಲಿ ಸಾರ್ವಜನಿಕರಿಂದ ಡಬಲ್ ಟ್ಯಾಕ್ಸ್ ವಸೂಲಾತಿ ಮಾಡುತ್ತಿದ್ದು, ನಿವಾಸಿಗಳಿಗೆ ಹೊರೆಯಾಗುತ್ತಿದೆ. ಸರ್ಕಾರ ಕೂಡಲೆ ಎಚ್ಚೆತ್ತುಕೊಂಡು, ಮೊದಲಿದ್ದಂತೆ ಅಧಿಕೃತವೆಂದು, ಮೊದಲಿದ್ದ ತೆರಿಗೆ ಕಟ್ಟಿಸಿಕೊಳ್ಳಬೇಕೆಂದು ಆಗ್ರಹಿಸಿದರು.

ಮನವಿಯನ್ನು ಡಿಶ್ ಮಂಜುನಾಥ ಓದಿ ಅಧಿಕಾರಿಗಳಿಗೆ ಸಲ್ಲಿಸಿದರು.

ಈ ವೇಳೆ ಜಿ.ಲಕ್ಷ್ಮೀಪತಿ, ಜಹಂಗೀರ್‌ಸಾಬ್, ಬ್ರಮ್ಮಾಚಾರಿ, ಶಾಬುದ್ದೀನ್, ಅಂಬಣ್ಣ, ಗುಂಡ್ರು ಹನುಮಂತ, ಸೆರೆಗಾರ್ ಹುಚ್ಚಪ್ಪ, ಶಿವರುದ್ರಪ್ಪ, ನಂದಿಬಂಡಿ ಬಾಲಾಜಿ, ಅಲ್ಲಾಭಕ್ಷಿ, ಬಿಸ್ನಳ್ಳಿ ಬಸವರಾಜಪ್ಪ ಮತ್ತಿತರರು ಇದ್ದರು.

# ಪೂರ್ವ ಮುಂಗಾರು ಮಳೆ ಆರಂಭ ಹಿನ್ನಲೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಡಿಸಿ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಆರಂಭಗೊಂಡಿರುವ ಹಿನ್ನಲೆಯಲ್ಲಿ ಮಳೆ ಹಾನಿಯಿಂದಾಗಿ ಸಂಭವಿಸಬಹುದಾದ ಅವಘಡಗಳನ್ನು ನಿಭಾಯಿಸಲು ಮುನ್ನೆಚ್ಚರಿಕೆಯಾಗಿ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಇಂದು, ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆರಂಭಿಕ ಮಳೆಯಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವವಿದ್ದು, ಪೂರಕವಾಗಿ ಆರೋಗ್ಯ ಇಲಾಖೆಯು ಪ್ರತಿ ಗ್ರಾಮಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಇದಕ್ಕೆ ಸ್ಥಳೀಯ–ಸಂಸ್ಥೆಗಳು ಕೈಜೋಡಿಸಬೇಕು ಎಂದು ಸೂಚಿಸಿದರು.

ಮಳೆಯಿಂದಾಗುವ ಮನೆಹಾನಿ ಮತ್ತು ಗುಡುಗು–ಸಿಡಿಲಿನಿಂದ ಜನ–ಜಾನುವಾರು ಪ್ರಾಣಹಾನಿ ತಡೆಗಟ್ಟಲು ಜಾಗೃತಿ ಮೂಡಿಸಬೇಕು, ಅಲ್ಲದೆ ಮಳೆ, ಸಿಡಿಲಿನಿಂದ ಉಂಟಾಗುವ ಯಾವುದೇ ಹಾನಿ ವರದಿಯನ್ನು ತ್ವರಿತವಾಗಿ ಸಲ್ಲಿಸಲು ಅಧಿಕಾರಿಗಳನ್ನು ನಿಯೋಜಿಸಿದ್ದು, ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ಕೈಗೊಂಡು ವರದಿ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸಮರ್ಪಕವಾಗಿ ಸರಬರಾಜು ಮಾಡಬೇಕು. ಈ ಬಾರಿ ಹೆಚ್ಚಿನ ಮಳೆಯಾಗುವ ಸಂಭವವಿದೆ ಎಂದು ಹವಮಾನ ಇಲಾಖೆಯು ಮುನ್ಸೂಚನೆ ನೀಡಿದ್ದು, ಮಳೆಯಿಂದ ಜಿಲ್ಲೆಯಲ್ಲಿ ಯಾವುದೇ ರೀತಿಯ ಹಾನಿ ಸಂಭವಿಸದಂತೆ ಎಚ್ಚರವಹಿಸಬೇಕು ಎಂದು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಅತಿಹೆಚ್ಚು ಮಳೆಯಾಗುತ್ತಿರುವುದು ವರದಿಯಾಗುತ್ತಿದ್ದು, ವಿದ್ಯುತ್ ಅವಘಡ ಉಂಟಾಗದಂತೆ ನಿಗಾವಹಿಸಬೇಕು. ಸಾರ್ವಜನಿಕರು ವಿದ್ಯುತ್‌ಗೆ ಸಂಬಂಧಿಸಿದಂತೆ ದೂರುಗಳಿಗೆ ಕರೆ ಮಾಡಿದಲ್ಲಿ ತಕ್ಷಣವೇ ಸ್ಪಂದಿಸಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಬಳ್ಳಾರಿ ನಗರದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಹಾಗೂ ಇತರೆ ಚರಂಡಿ ಮಾರ್ಗಗಳನ್ನು ಸ್ವಚ್ಛಗೊಳಿಸಲು ಕೂಡಲೆ ಕ್ರಮವಹಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಹಲವು ಸಮನ್ವಯ ವಿಷಯಗಳ ಕುರಿತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತ ಹೇಮಂತ್.ಎನ್., ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್‌ಸಾಬ್, ಡಿಹೆಚ್‌ಓ ಡಾ.ವೈ.ರಮೇಶ್‌ಬಾಬು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು ಇತರರಿದ್ದರು.

# ಇಂದು ಬಿಕ್ಕಿ ಮರಡಿ ದುರ್ಗಮ್ಮದೇವಿ ರಥೋತ್ಸವ

**ರಥೋತ್ಸವಕ್ಕೆ ಕೋಳಿ ತೂರಿ ಭಕ್ತಿ ಸಮರ್ಪಿಸಲಿದ್ದಾರೆ. । ನೂತನ ವದು– ವರರು ರಥೋತ್ಸವದ ಕಳಶ ವೀಕ್ಷಿಸಲಿದ್ದಾರೆ**

**ಹಂಪಿ ಟೈಮ್ಸ್ ಕೊಟ್ಟೂರು**

ವಿಶಿಷ್ಟಾಚರಣೆ ಹೊಂದಿರುವ ಬಿಕ್ಕಿ ಮರಡಿ ದುರ್ಗಮ್ಮ ದೇವಿಯ ರಥೋತ್ಸವವು ಬೌದ್ಧ ಪೂರ್ಣಿಮೆಯ ದಿನ ಗುರುವಾರ ಸಂಜೆ ಸಾವಿರಾರು ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಲಿದೆ

ರಥೋತ್ಸವದಲ್ಲಿ ಬಾಳೆ ಹಣ್ಣು, ಉತ್ತುತ್ತಿ, ಸೂರಬೆಲ್ಲ ಮಂಡಿಕ್ಕಿ ದವನ ಎಸೆಯುವುದು ಸಾಮನ್ಯ, ಆದರೆ ಕೊಟ್ಟೂರು ಕೆರೆ ಏರಿ ಮೇಲಿನ, ಬಿಕ್ಕಿ ಮರಡಿ ದುರ್ಗಮ್ಮ ದೇವರಿಗೆ ಯಾವುದೇ ಪ್ರಾಣಿಗಳನ್ನು ಬಲಿ ಕೊಡದೆ, ಜೀವಂತ ಕೋಳಿಗಳನ್ನ ತೂರುವುದು ಇಲ್ಲಿನ ಒಂದು ವಿಶೇಷ.

ಈ ದೃಶ್ಯ ಕಣ್ತುಂಬಿಕೊಳ್ಳಲು ಭಕ್ತರ ದಂಡು ದಂಡು ಮಧ್ಯಾಹ್ನ 3 ರಿಂದಲೇ ಕೆರೆಯ ಮರಡಿ ಮೇಲೆ ದೇವಸ್ಥಾನ ಬಳಿ ಜನ ಜಮಾವಣೆಗೊಳ್ಳುತ್ತೆ. ಹರಕೆ ಹೊತ್ತ ಭಕ್ತರು ತೂರಿದ ಕೋಳಿಗಳನ್ನು ಯುವಕರು ಜೀವಂತವಾಗಿ ಹಿಡಿದು ಅವುಗಳನ್ನ ಸಾಕಿ ಅದರಿಂದ ಮನೆಯಲ್ಲಿ ಹೆಚ್ಚುವರಿ ಮಾಡಿಕೊಂಡು, ಅದಕ್ಕೆ ಪ್ರತಿಯಾಗಿ ಮುಂದಿನ ವರ್ಷ ಮರಿ ಕೋಳಿ, ದೊಡ್ಡ ಕೋಳಿಗಳನ್ನು ಮತ್ತೆ ರಥೋತ್ಸವದಲ್ಲಿ ತೂರುತ್ತಾರೆ. ಇದು ಈ ದೇವರ ವಿಶೇಷ.

ದುರ್ಗಾದೇವಿಯ ರಥೋತ್ಸವದ ಕಳಶ ವೀಕ್ಷಿಸಲು ಕೊಟ್ಟೂರು ಸುತ್ತಲಿನ ಹತ್ತಾರು ಹಳ್ಳಿಯಿಂದ ನೂರಾರು ನೂತನ ವಧು– ವರರು ಆಗಮಿಸುವುದು ಇಲ್ಲಿನ ಮತ್ತೊಂದು ವಿಶೇಷ.

# ತೋಟಗಾರಿಕೆ ತರಬೇತಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ತೋಟಗಾರಿಕೆ ಇಲಾಖೆ ವತಿಯಿಂದ 2024–25ನೇ ಸಾಲಿಗೆ 09 ತಿಂಗಳ ತೋಟಗಾರಿಕೆ ತರಬೇತಿಗಾಗಿ ಜಿಲ್ಲೆಯ ರೈತ ಮಕ್ಕಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2024ರ ಜುಲೈ ರಿಂದ 2025 ರ ಮಾರ್ಚ್ 31 ರ ವರೆಗೆ ಒಟ್ಟು 09 ತಿಂಗಳ ತರಬೇತಿಯನ್ನು ನೀಡಲಾಗುತ್ತದೆ.

**ಅಭ್ಯರ್ಥಿಗಳ ಆಯ್ಕೆ ಗುರಿ:** ಮಹಿಳೆಯರು 8, ಪುರುಷರು 16, ಪರಿಶಿಷ್ಟ ಜಾತಿ 03, ಪರಿಶಿಷ್ಟ ಪಂಗಡ 01 ಮತ್ತು ಇತರೆ 20 ಅಭ್ಯರ್ಥಿಗಳು ಸೇರಿ ಒಟ್ಟು 24 ಅಭ್ಯರ್ಥಿಗಳನ್ನು ತೋಟಗಾರಿಕೆ ಉಪ ನಿರ್ದೇಶಕರು ಆಯ್ಕೆ ಮಾಡುತ್ತಾರೆ.

ಅಭ್ಯರ್ಥಿಗಳ ವಯೋಮಿತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ವರ್ಷದಿಂದ 33 ವರ್ಷದೊಳಗೆ ಇರಬೇಕು. ಇತರರಿಗೆ 18 ವರ್ಷದಿಂದ 30 ವರ್ಷದೊಳಗೆ ಹಾಗೂ ಮಾಜಿ ಸೈನಿಕರಿಗೆ 33 ರಿಂದ 65 ವರ್ಷದೊಳಗಿರಬೇಕು. ಅಭ್ಯರ್ಥಿಗಳು ಕನಿಷ್ಠ ಕನ್ನಡ ವಿಷಯಗಳೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಹೊಂದಲು ಬಯಸುವ ಅಭ್ಯರ್ಥಿಯ ತಂದೆ–ತಾಯಿ, ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು.

ಅರ್ಜಿಗಳನ್ನು ಮೇ 23 ರಿಂದ ಜೂನ್ 03 ರ ವರೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಬಳ್ಳಾರಿ, ಕಚೇರಿಯಲ್ಲಿ ಪಡೆಯಬಹುದು ಅಥವಾ ಇಲಾಖಾ ವೆಬ್ ಸೈಟ್ https://horticulturedir.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿಮಾಡಿದ ಅರ್ಜಿಗಳನ್ನು ಜೂನ್ 03 ರ ಸಂಜೆ 5.30 ರ ಒಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು. ಜೂನ್ 06 ರಂದು ಬೆಳಿಗ್ಗೆ 11 ಗಂಟೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

**ವಿಶೇಷ ಸೂಚನೆ:** ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಿತಿಯು ಸರ್ಕಾರದ ಮೀಸಲಾತಿ ನಿಯಮ ಕಡ್ಡಾಯ ಪಾಲನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳ ಮೀಸಲಾತಿ ಮುಗಿದ ನಂತರ ಉಳಿಕೆ ಮೀಸಲಾತಿಗಳನ್ನು ಇತರೆ ಅಭ್ಯರ್ಥಿಗಳಿಗೆ ನೀಡಲಾಗುವುದು. ಒಂದು ವೇಳೆ ಮೀಸಲಾದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಮಹಿಳಾ ಮೀಸಲಾತಿ (ಶೇ.33)ಯನ್ನು ನಿಯಮಾನುಸಾರ ಪಾಲಿಸತಕ್ಕದ್ದು. ಮಹಿಳಾ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಸ್ಥಾನಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಮೀಸಲಾತಿ ಕುರಿತು ಸರ್ಕಾರದ ಮೀಸಲಾತಿಗಳನ್ವಯ ಆಯ್ಕೆ ಸಮಿತಿ ನಿರ್ಧರಿಸಲಾಗುತ್ತದೆ.

ಮಾಜಿ ಸೈನಿಕ ಅಭ್ಯರ್ಥಿಗಳು ಆಯ್ಕೆಗೊಂಡಲ್ಲಿ ಈಗಾಗಲೇ ಇಲಾಖೆಯಲ್ಲಿ ರೈತ ಮಕ್ಕಳಿಗೆ ಕಾಯ್ದಿರಿಸಿರುವ ಗುರಿಗಳಿಗೆ ಹೆಚ್ಚುವರಿಯಾಗಿ ಸೇರ್ಪಡಿಸಲಾಗುವುದು. ಕಲಿಕೆಯ ಎಲ್ಲಾ ತರಹದ ಅವಕಾಶಗಳನ್ನು ಕಲ್ಪಿಸಲಾಗುವುದು. ಆದರೆ, ವಸತಿ ನಿಲಯದಲ್ಲಿ ವಾಸ್ತವ್ಯದ ವ್ಯವಸ್ಥೆಯು ಕಡ್ಡಾಯ ಇರುವುದಿಲ್ಲ ಹಾಗೂ ಶಿಷ್ಯವೇತನ (ಸ್ಟೈಫಂಡ್) ಕ್ಕೆ ಅವಕಾಶವಿರುವುದಿಲ್ಲ.

ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ಆಯ್ಕೆಯು ತೋಟಗಾರಿಕೆ ಪ್ರಾಯೋಗಿಕ ತರಬೇತಿಯಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳನ್ನು ಸ್ವಾವಲಂಬಿಯಾಗಿ ನಿರ್ವಹಿಸಲು ಶಕ್ತನಾಗಿರಬೇಕು ಹಾಗೂ ಚಟುವಟಿಕೆ ನಿರ್ವಹಿಸಲು ಸಾಧ್ಯವಾಗದಂತಹ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಇದಕ್ಕಾಗಿ ಪ್ರತ್ಯೇಕ ಸಂದರ್ಶನ ಪತ್ರ ಕಳುಹಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಅಥವಾ ದೂ.08392–278588 ಗೆ ಸಂಪರ್ಕಿಸಬಹುದು.

## ವಿಜ್ಞಾನ

# ಬಾಹ್ಯಾಕಾಶದಲ್ಲಿ ಶಬ್ದ ಯಾಕೆ ಕೇಳಲ್ಲ?

**ಆರ್.ಬಿ.ಗುರುಬಸವರಾಜ**

ನೀವು ಬಾಹ್ಯಾಕಾಶ ನೌಕೆಯೊಂದರಲ್ಲಿ ಕುಳಿತಿದ್ದೀರಿ ಎಂದು ಭಾವಿಸಿಕೊಳ್ಳಿ. ನಿಮ್ಮ ಕಣ್ಣೆದುರಿಗೆ ಇನ್ನೊಂದು ಬಾಹ್ಯಾಕಾಶ ನೌಕೆ ಇದ್ದಕ್ಕಿದ್ದಂತೆ ಸ್ಫೋಟವಾಯ್ತು ಎಂದುಕೊಳ್ಳಿ. ಸ್ಫೋಟಗೊಂಡಾಗ ಅಲ್ಲಿ ಭಾರಿ ಶಬ್ದ ಉಂಟಾಗುತ್ತದೆ ಅಲ್ಲವೇ? ಆದರೆ ಆ ಭಾರಿ ಶಬ್ದ ನಿಮ್ಮ ಕಿವಿಗೆ ತಾಕುವುದೇ ಇಲ್ಲ. ಯಾಕೆಂದರೆ ಬಾಹ್ಯಾಕಾಶದಲ್ಲಿ ಶಬ್ದ ಪ್ರಸಾರವಾಗುವುದಿಲ್ಲ. ಬಾಹ್ಯಾಕಾಶದಲ್ಲಿ ಬಾಹ್ಯಾಕಾಶ ನೌಕೆ ಸ್ಫೋಟಗೊಂಡರೆ, ಕ್ಷುದ್ರಗ್ರಹಗಳು ಪರಸ್ಪರ ಅಪ್ಪಳಿಸಿದರೆ, ಸೂಪರ್ನೋವಾಗಳು ಸಂಭವಿಸಿದರೆ, ಏನೇ ಆದರೂ ಬಾಹ್ಯಾಕಾಶ ಮಾತ್ರ ಮೌನವಾಗಿರುತ್ತವೆ.

ಬಾಹ್ಯಾಕಾಶ ನೌಕೆಯಲ್ಲಿ, ನಿಮ್ಮ ನೌಕೆಗೆ ಗಾಳಿಯಿಂದ ತುಂಬಿರುವ ಕಾರಣ ನೀವು ಅದರಲ್ಲಿನ ಇತರ ಪ್ರಯಾಣಿಕರ ಶಬ್ದವನ್ನು ಕೇಳಬಹುದು. ಆದರೆ ನೀವು ಇನ್ನೊಂದು ನೌಕೆಯ ಅಥವಾ ಇನ್ನ್ಯಾವುದೇ ಬಾಹ್ಯಾಕಾಶದ ಶಬ್ದವನ್ನು ಕೇಳಲು ಆಗುವುದಿಲ್ಲ. ಏಕೆಂದರೆ ಬಾಹ್ಯಾಕಾಶವು ನಿರ್ವಾತವಾಗಿದ್ದು, ಶಬ್ದ ಪ್ರಸಾರವಾಗಲು ಅಗತ್ಯವಿರುವ ಮಾಧ್ಯಮ ಇಲ್ಲ.



ಭೂಮಿಯ ಮೇಲೆ ಶಬ್ದ ಸುಲಭವಾಗಿ ಪ್ರಸಾರವಾಗುತ್ತದೆ. ಗಾಳಿ, ನೀರಿನಂತಹ ಮಾಧ್ಯಮಗಳು ಶಬ್ದ ಪ್ರಸಾರಕ್ಕೆ ಸಹಾಯ ಮಾಡುತ್ತವೆ. ಆದರೆ ಬಾಹ್ಯಾಕಾಶದಲ್ಲಿ ಇಂತಹ ಯಾವುದೇ ಮಾಧ್ಯಮ ಇಲ್ಲದ ಕಾರಣ ಅಲ್ಲಿ ಶಬ್ದ ಪ್ರಸಾರ ಆಗುವುದಿಲ್ಲ.

ಬಾಹ್ಯಾಕಾಶ ಯಾನಿಗಳು ಸಾಮಾನ್ಯವಾಗಿ ವಿಶೇಷ ಉಡುಪು ಧರಿಸಿರುವುದನ್ನು ನೋಡಿರಬಹುದು. ಈ ಉಡುಪಿನಲ್ಲಿ ಉಸಿರಾಡಲು ಅಗತ್ಯವಿರುವ ಆಮ್ಲಜನಕ ಸರಬರಾಜು ವ್ಯವಸ್ಥೆ ಮಾಡಲಾಗಿರುತ್ತದೆ. ಆದರೆ ಅವರ ಮಾತು ಹೊರಗಿನ ಇನ್ನೊಬ್ಬರಿಗೆ ಕೇಳುವುದಿಲ್ಲ. ಇನ್ನೊಬ್ಬ ಗಗನಯಾನಿ ಪಕ್ಕದಲ್ಲೇ ಇದ್ದರೂ ಎಷ್ಟೇ ಕೂಗಿದರೂ ಅವರ ಮಾತು ಪರಸ್ಪರ ಕೇಳುವುದಿಲ್ಲ. ಅದಕ್ಕಾಗಿ ಗಗನಯಾನಿಗಳು ಪರಸ್ಪರ ರೇಡಿಯೋ ತರಂಗಗಳನ್ನು ಬಳಸುತ್ತಾರೆ. ಬಾಹ್ಯಾಕಾಶ ಉಡುಪುಗಳಲ್ಲಿ ದ್ವಿಮುಖ ರೇಡಿಯೋ ಸಂವಹನ ವ್ಯವಸ್ಥೆ ಮಾಡಲಾಗಿರುತ್ತದೆ. ರೇಡಿಯೊವು ಬೆಳಕಿನಂತೆಯೇ ವಿದ್ಯುತ್ಕಾಂತೀಯ ವಿಕಿರಣದ ಒಂದು ರೂಪವಾಗಿದೆ ಮತ್ತು ಆದ್ದರಿಂದ ಬಾಹ್ಯಾಕಾಶದ ನಿರ್ವಾತದ ಮೂಲಕ ಚೆನ್ನಾಗಿ ಚಲಿಸಬಹುದು. ಗಗನಯಾತ್ರಿಗಳ ಟ್ರಾನ್ಸ್‌ಮಿಟರ್ ಧ್ವನಿ ತರಂಗ ರೂಪವನ್ನು ರೇಡಿಯೋ ತರಂಗ ರೂಪಕ್ಕೆ ಪರಿವರ್ತಿಸುತ್ತದೆ ಮತ್ತು ರೇಡಿಯೊ ತರಂಗಗಳನ್ನು ಬಾಹ್ಯಾಕಾಶದ ಮೂಲಕ ಇತರ ಗಗನಯಾತ್ರಿಗಳಿಗೆ ಕಳುಹಿಸುತ್ತದೆ, ಅಲ್ಲಿ ಅದನ್ನು ಇತರ ಮನುಷ್ಯನಿಗೆ ಕೇಳಲು ಧ್ವನಿಯಾಗಿ ಪರಿವರ್ತಿಸಲಾಗುತ್ತದೆ.

# ಜಿಲ್ಲಾಸ್ಪತ್ರೆಗೆ ಡಿ.ಸಿ. ನಲಿನ್ ಅತುಲ್ ಭೇಟಿ : ಪರಿಶೀಲನೆ



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಸ್ಪತ್ರೆಗೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಮೇ 20 ರಂದು ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಅವರು ಸ್ವತಃ ತಾವೇ ಖುದ್ದಾಗಿ ರೋಗಿಗಳ ವಾರ್ಡ್‌ಗೆ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸುವುದರ ಜೊತೆಗೆ ಅಲ್ಲಿ ರೋಗಿಗಳಿಗೆ ನೀಡುತ್ತಿರುವ ಚಿಕಿತ್ಸಾ ಸೌಲಭ್ಯಗಳ ಕುರಿತು ಪರಿಶೀಲಿಸಿದರು. ಔಷಧ ಉಗ್ರಾಣವನ್ನು ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ಉತ್ತಮವಾದ ಚಿಕಿತ್ಸೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಕಿಮ್ಸ್ ನಿರ್ದೇಶಕರಾದ ವೈಜನಾಥ ಇಟಗಿ, ಜಿಲ್ಲಾ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ವೇಣು ಗೋಪಾಲ್, ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರಾದ ಜಯಲಕ್ಷ್ಮೀ, ಸೇರಿದಂತೆ ವೈದ್ಯಾಧಿಕಾರಿಗಳು ತರರು ಉಪಸ್ಥಿತರಿದ್ದರು.

# ಡಿ.ಇಎಲ್.ಇಡಿ ಕೋರ್ಸ್ ದಾಖಲಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು ಪ್ರಸಕ್ತ ಸಾಲಿನ ಪ್ರಥಮ ವರ್ಷದ ಡಿ.ಇಎಲ್.ಇಡಿ ಕೋರ್ಸ್‌ನ ದಾಖಲಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಡಯಟ್‌ನ ಪ್ರಾಂಶುಪಾಲರು ಹಾಗೂ ನಿರ್ದೇಶಕರು ತಿಳಿಸಿದ್ದಾರೆ.

ಅಸಕ್ತರು ನಿಗದಿತ ನಮೂನೆ ಅರ್ಜಿಯನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಅಥವಾ ವೆಬ್‌ಸೈಟ್ www.schooleducation.kar.nic.in ನಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜೂನ್ 05 ರೊಳಗಾಗಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ವೆಬ್‌ಸೈಟ್ ಅಥವಾ ಸಂಸ್ಥೆಯ ಮೊ.9964891659, 9449380535 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA